2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**23/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸಿ. ಮಧುಸೂಧನ್ | | ಪಿಡಬ್ಲ್ಯೂ-38 |
| ತಂದೆಯ ಹೆಸರು | - ಚೌಡಯ್ಯ | | ಸಿಡಬ್ಲ್ಯೂ-68 |
| ವಯಸ್ಸು | - 45 ವರ್ಷ | | |
| ಉದ್ಯೋಗ | - ಸಿ.ಪಿ.ಐ ಹೊಳಲ್ಕೆರೆ. | | |
| ವಾಸ ಸ್ಥಳ | - ಹೊಳಲ್ಕೆರೆ | | |

ದಿನಾಂಕಃ 31-10-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ದಿನಾಂಕಃ- 27-09-2013 ರಿಂದ 12-07-2016 ರವರೆಗೆ ನಾನು ಸಿ.ಪಿ.ಐ ಎಂದು ಕಡೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ- 26-10-2013 ರಂದು ಬೆಳಿಗ್ಗೆ 7.45 ಗಂಟೆಗೆ ಈ ಪ್ರಕರಣದ ಕಡತವನ್ನು ಮುಂದಿನ ಹಂತದ ತನಿಖೆಗಾಗಿ ಪಿ.ಎಸ್.ಐ ಗೀರೀಶ್ ರವರಿಂದ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಈ ಪ್ರಕರಣದ ಆರೋಪಿ ಜಬೀವುಲ್ಲಾನನ್ನು ಸಖರಾಯಪಟ್ಟಣ ಪೊಲೀಸರು ಬೆಂಗಳೂರಿನಿಂದ ಕರೆದುಕೊಂಡು ಬಂದಿದ್ದು, ಸದರಿ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಮಾಡಲಾಯಿತು. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ದಿನಾಂಕಃ- 15-09-2013 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ

ಪ್ರಕರಣದ ಇತರೆ ಆರೋಪಿಗಳೊಂದಿಗೆ ಸೇರಿ ಹರೀಶ್ ಎಂಬಾತನನ್ನು ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾರೆ.

3. ಮೃತನ ಮೊಬೈಲ್ ನ್ನು 5 ನೇ ಆರೋಪಿಯು ಸ್ವತಃ ತೆಗೆದುಕೊಂಡಿದ್ದು, ಅದರಲ್ಲಿ ಮೃತನ ಸಿಮ್ ನ್ನು ತೆಗೆದು ಬಿಸಾಕಿ ತನ್ನ ಸಿಮ್ ನ್ನು ಹಾಕಿ 2 ದಿನ ಉಪಯೋಗಿಸಿಕೊಂಡಿದ್ದು, ನಂತರ ಮೃತನ ಮೊಬೈಲ್ ಹ್ಯಾಂಡ್ ಸೆಟ್ ನ್ನು ಧ್ವಂಸ ಮಾಡಿದ್ದು, ಸದರಿ 5 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ಉಪಯೋಗಿಸಿದ ಸಿಮ್ ನ್ನು ಹಾಲಿ ನಾನು ಉಪಯೋಗಿಸುತ್ತಿರುವ ಸೆಟ್ ನಲ್ಲಿ ಇದ್ದು ಅದನ್ನು ಹಾಜರುಪಡಿಸುತ್ತೇನೆ " ಎಂದು ಹೇಳಿದ್ದು ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-59 ಎಂದು ಗುರುತಿಸಲಾಯಿತು.

4. ನಂತರ ಪಂಚರಾದ ಸದಾಶಿವಯ್ಯ ಮತ್ತು ರವಿಕುಮಾರ್ ಇವರನ್ನು ಠಾಣೆಗೆ ಬರಲು ಹೇಳಿದೆವು. ಅದರಂತೆ ಅವರು ಬಂದ ನಂತರ ಅವರ ಸಮಕ್ಷಮ 5 ನೇ ಆರೋಪಿ ಹಾಜರುಪಡಿಸಿದ ಮೊಬೈಲ್ ಮತ್ತು ಸಿಮ್ ನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಮಹಜರನ್ನು ಈಗಾಗಲೇ ನಿಶಾನೆ ಪಿ-15 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-15(ಸಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ ಪ್ರಕ್ರಿಯೆಯನ್ನು ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಜರುಗಿಸಲಾಯಿತು. ಈಗ ನಿಶಾನೆ ಪಿ-15 ರಡಿ ಅಮಾನತ್ತುಪಡಿಸಿದ ಸದರಿ ಮೊಬೈಲ್ ಮತ್ತು ಸಿಮ್ ನ್ನು ಈಗ

ತೋರಿಸಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮೊಬೈಲ್ ಸೆಟ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆಮಾಲು 4 ಎಂದು ಗುರುತಿಸಲಾಗಿದೆ ಮತ್ತು ಸದರಿ ಮುದ್ದೆಮಾಲು 4 ನೋಕಿಯಾ ಕಂಪನಿಯದ್ದಾಗಿರುತ್ತದೆ. ಮುದ್ದೆಮಾಲು 4 ರಲ್ಲಿ ಅಳವಡಿಸಿದ್ದ ಸಿಮ್ ನ್ನು ಈಗ ನೋಡುತ್ತಿದ್ದು ಅದರ ಯೂನಿಕ್ ಸಂಖ್ಯೆ- 8991450002020, 9983385 ಇಸಿಹೆಚ್ - 2 ಮತ್ತು ಆ ಸಿಮ್ ನ ಮೊಬೈಲ್ ನಂಬರ್ 9060906029 ಇರುತ್ತದೆ. ಅದನ್ನು ಈಗ ಮುದ್ದೆಮಾಲು 13 ಎಂದು ಗುರುತಿಸಲಾಯಿತು.

5. ಸದರಿ ಮೊಬೈಲ್ ಮತ್ತು ಸಿಮ್ ಗಳ ನಂಬರ್ ಗಳನ್ನು ನಾನು ನಿಶಾನೆ ಪಿ-15 ರಲ್ಲಿ ಕಾಣಿಸಿರುತ್ತೇನೆ. ಸದರಿ ಮೊಬೈಲ್ ಮತ್ತು ಸಿಮ್ ನ್ನು ಠಾಣಾ ಮುದ್ದೆಮಾಲು ಮಾಲು ಪಟ್ಟಿ ಸಂಖ್ಯೆ-43/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

6. 1 ನೇ ಆರೋಪಿಯಾದ ಅನಂತರಾಮೇಗೌಡ ಈತನನ್ನು ಬಂಧಿಸಲೆಂದು ಪಿ.ಎಸ್.ಐ ಸಂತೋಷ್ ಇವರನ್ನು ಕಳುಹಿಸಿದ್ದು ಅದರಂತೆ ಅವರು ಸದರಿ ಆರೋಪಿಯನ್ನು ಆತನ ಮನೆಯಿಂದ ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾನು ಸದರಿ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಮಾಡಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ತನ್ನೊಂದಿಗೆ ಬಂದರೆ ಶವವನ್ನು ಊತಿರುವ ಜಾಗವನ್ನು ಮತ್ತು ಕೃತ್ಯ ಎಸಗಿದ ಜಾಗವನ್ನು ತೋರಿಸುವುದಾಗಿ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಓಮಿನಿ ಕಾರನ್ನು

ತನ್ನೊಂದಿಗೆ ಬಂದರೆ ತೋರಿಸಿಕೊಡುತ್ತೇನೆ ಹಾಗೂ ಕೊಲೆ ಮಾಡಿದ ದಿನ ಉಪಯೋಗಿಸಿದ ಮೊಬೈಲ್ ನ್ನು ತನ್ನಲ್ಲಿ ಇದ್ದು ಹಾಜರುಪಡಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-60 ಎಂದು ಗುರುತಿಸಲಾಯಿತು. ನಂತರ 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಪಂಚರಾದ ಕೃಷ್ಣೇಗೌಡ ಮತ್ತು ಸುರೇಶ್ ಇವರನ್ನು ಠಾಣೆಗೆ ಬರಲು ಹೇಳಲಾಯಿತು ಮತ್ತು ಅವರ ಸಮಕ್ಷಮ 1 ನೇ ಆರೋಪಿ ಹಾಜರುಪಡಿಸಿದ ಸಿಲ್ವರ್ ಬಣ್ಣದ ಸ್ಯಾಮ್ ಸ್ಯಂಗ್ ಮೊಬೈಲ್ ಸೆಟ್ ನ್ನು ಮತ್ತು ಅದರಲ್ಲಿದ್ದ ಐಡಿಯಾ ಕಂಪನಿಯ ಸಿಮ್ ಮೊಬೈಲ್ ಸಂಖ್ಯೆ- 9242888865 ಮತ್ತು ಅದರ ಯೂನಿಕ್ ನಂಬರ್- 8991440001516623509 ಎಂದು ಇದ್ದು ಅದನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರ್ ನ ಪ್ರಕ್ರಿಯೆಯನ್ನು ಬೆಳಿಗ್ಗೆ 11.15 ಗಂಟೆಯಿಂದ 11.45 ಗಂಟೆಯವರೆಗೆ ಜರುಗಿಸಲಾಯಿತು. ಮತ್ತು ಅದನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ- 44/2013 ರಲ್ಲಿ ದಾಖಲಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಮಹಜರ್ ನ್ನು ಈಗಾಗಲೇ ನಿಶಾನೆ ಪಿ-16 ಎಂದು ಗುರುತಿಸಲಾಗಿದ್ದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-16(ಬಿ) ಎಂದು ಗುರುತಿಸಲಾಯಿತು.

7. ಸದರಿ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ತಾನು ಮೃತನ ಊತಿಟ್ಟ ಶವವನ್ನು ತೋರಿಸುವುದಾಗಿ ಹೇಳಿದ್ದರಿಂದ ಶವ ಮಹಜರ್ ಕ್ರಮ ಜರುಗಿಸಲು ದೂರವಾಣಿ ಮೂಲಕ ಚಿಕ್ಕಮಗಳೂರಿನ ಉಪ ವಿಭಾಗಾಧಿಕಾರಿಗಳಿಗೆ ಮಾತನಾಡಿ ಶವ ಮಹಜರನ್ನು ಜರುಗಿಸಲು

ಕೇಳಿಕೊಳ್ಳಲಾಯಿತು. ಅದರಂತೆ ಸದರಿ ಉಪವಿಭಾಗಾಧಿಕಾರಿಗಳು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಬಂದರು. ನಂತರ ಅವರಿಗೆ ಪ್ರಕರಣದ ಬಗ್ಗೆ ತಿಳಿಸಿ, ಆರೋಪಿಯು ಊತಿಟ್ಟ ಶವದ ಪಂಚನಾಮೆ ಮಾಡಲು ಮನವಿ ಪತ್ರವನ್ನು ನೀಡಲಾಯಿತು ಸದರಿ ಮನವಿ ಪತ್ರವನ್ನು ಈಗಾಗಲೇ ನಿಶಾನೆ ಪಿ1 ಎಂದು ಗುರುತಿಸಲಾಗಿದ್ದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-1(ಬಿ) ಎಂದು ಗುರುತಿಸಲಾಯಿತು.

8. ನಂತರ ಉಪವಿಭಾಗಾಧಿಕಾರಿಗಳ ನಿರ್ದೇಶದನ ಮೇರೆಗೆ ಮೃತನ ತಂದೆ-ತಾಯಿ ಮತ್ತು ಸಂಬಂಧಿಕರನ್ನು ಬರ ಹೇಳಿ ಅವರನ್ನು ಕರೆಸಿಕೊಂಡಿರುತ್ತೇವೆ. ಅವರೊಂದಿಗೆ ಫ್ರಾ.ಸಾಃ1 ಉಪವಿಭಾಗಾಧಿಕಾರಿಗಳು ಮಾತನಾಡಿಕೊಂಡಿರುತ್ತಾರೆ. ಮತ್ತು ಫ್ರಾ.ಸಾಃ1 ರವರು 1 ನೇ ಆರೋಪಿಯೊಂದಿಗೂ ಸಹ ಪ್ರತ್ಯೇಕವಾಗಿ ಮಾತನಾಡಿರುತ್ತಾರೆ. ನಂತರ ಫ್ರಾ.ಸಾಃ1 ರವರ ಸೂಚನೆ ಮೇರೆಗೆ ಪಂಚರನ್ನು ಮತ್ತು ಕಡೂರಿನಿಂದ ಪೌರ ಕಾರ್ಮಿಕರನ್ನು ಠಾಣೆಗೆ ಕರೆಸಲಾಯಿತು. ನಂತರ 1 ನೇ ಆರೋಪಿ ಹೇಳಿದಂತೆ ಫ್ರಾ.ಸಾಃ1, ಪಂಚರು ಮತ್ತು ಮೃತನ ತಂದೆ-ತಾಯಿ ಮತ್ತು ಸಂಬಂಧಿಕರೊಂದಿಗೆ ನಾವೆಲ್ಲರೂ ಸುಮಾರು ಮಧ್ಯಾಹ್ನ 12 ಗಂಟೆಗೆ ಠಾಣೆಯಿಂದ ಹೊರಟೆವು. ನಂತರ 1 ನೇ ಆರೋಪಿಯು ನಮ್ಮನ್ನು ಅಣಚೀಹಳ್ಳಿ, ಚುರ್ಚುಗುಡ್ಡದ ಹತ್ತಿರ ಇರುವ ಆತನ ಜಮೀನಿಗೆ ಹೊಂದಿಕೊಂಡಂತಿರುವ ಗಟ್ಟಿ ಹಳ್ಳ ಎಂಬ ಸ್ಥಳಕ್ಕೆ ಕರೆದುಕೊಂಡು ಹೋದನು. ಸದರಿ ಆರೋಪಿಯು ಫ್ರಾ.ಸಾಃ1 ರವರಿಗೆ ಶವ ಊತಿಟ್ಟ ಸ್ಥಳವನ್ನು ತೋರಿಸಿದನು. ನಂತರ

ಶವವನ್ನು ಪೌರ ಕಾರ್ಮಿಕರ ಸಹಾಯದಿಂದ ಹೊರತೆಗೆಯಲಾಯಿತು. ನಂತರ ಕಲಂ 174 ರಡಿಯಲ್ಲಿ ಫ್ರಾ.ಸಾಃ1 ರವರು ಶವ ಮಹಜರನ್ನು ಮಾಡಿರುತ್ತಾರೆ. ಸದರಿ ಶವವನ್ನು ನಾನು ಸಹ ನೋಡಿದ್ದು ಅದು ಕೊಳೆತ ಸ್ಥಿತಿಯಲ್ಲಿತ್ತು. ಶವದ ಮೈಮೇಲೆ ಒಂದು ಚಡ್ಡಿ ಮತ್ತು ಬಲಕೈಯಲ್ಲಿ ತಾಯಿತ ಇತ್ತು. ಸದರಿ ಶವವನ್ನು ಮೃತನ ತಂದೆ-ತಾಯಿಗಳು ತನ್ನ ಮಗ ಹರೀಶ್ ಎಂದು ಗುರುತಿಸಿರುತ್ತಾರೆ.

9. ಮೃತನ ಅಕ್ಕಳಾದ ಲಕ್ಷ್ಮಿದೇವಿ ಇವರು ಮೃತನ ಬಲಗೈಯಲ್ಲಿದ್ದ ತಾಯಿತವನ್ನು ನೋಡಿ ಉಕ್ಕಡ ಗ್ರಾತ್ರಿ ಜಾತ್ರೆಯಲ್ಲಿ ತಂದು ನಾನೇ ನನ್ನ ತಮ್ಮನಾದ ಮೃತ ಹರೀಶನಿಗೆ ಕಟ್ಟಿದ್ದಾಗಿ ಹೇಳಿದರು. ಶವ ಮಹಜರ್ ಪ್ರಕ್ರಿಯೆಯು ಸಂಜೆ 4.30 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಫ್ರಾ.ಸಾಃ1 ರವರು ಶವವನ್ನು ಶವ ಪರೀಕ್ಷೆ ಮಾಡಲು ವೈದ್ಯಾಧಿಕಾರಿಯವರಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ಫ್ರಾ.ಸಾಃ1 ರವರು ಜರುಗಿಸಿದ ಮಹಜರ್ ದಾಖಲಾತಿಗಳನ್ನು ನನಗೆ ಹಸ್ತಾಂತರಿಸಿದರು.

10. ಆರೋಪಿಯು ಶವವನ್ನು ಹೂಳಲು ಉಪಯೋಗಿಸಿದ ಗುದ್ದಲಿಯನ್ನು ಶವ ಮಹಜರ್ ಕಾಲದಲ್ಲಿ ಫ್ರಾ.ಸಾಃ1 ರವರು ವಶಪಡಿಸಿಕೊಂಡಿದ್ದು ಅದನ್ನು ನನಗೆ ನೀಡಿರುತ್ತಾರೆ. ನಂತರ ವೈದ್ಯಾಧಿಕಾರಿಗಳು ಶವದ ಪರೀಕ್ಷೆಯನ್ನು ಮಾಡಿದ್ದು ನಂತರ ಶವವನ್ನು ಪಿ.ಸಿಃ- ಜಯಕುಮಾರ್ ರವರಿಗೆ ಶವವನ್ನು ಮೃತನ ಸಂಬಂಧಿಕರಿಗೆ ಹಸ್ತಾಂತರಿಸಲು ತಿಳಿಸಿ ಠಾಣೆಗೆ ಮರಳಿ ಬಂದಿರುತ್ತೇನೆ.

11. ನಂತರ ಫ್ರಾ.ಸಾಃ1 ರವರು ನನ್ನ ವಶಕ್ಕೆ ನೀಡಿದ ಮುದ್ದೆಮಾಲು 1

ಗುದ್ದಲಿಯನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ- 44(ಎ)/2013 ರಲ್ಲಿ ಅಳವಡಿಸಿ ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಗಿರುತ್ತದೆ.

12. ನಂತರ ಆರೋಪಿತರಾದ 5 ನೇ ಆರೋಪಿ ಜಬೀವುಲ್ಲಾ ಮತ್ತು 1 ನೇ ಆರೋಪಿ ಅನಂತರಾಮೇಗೌಡ ಇವರುಗಳು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದ ಮೇರೆಗೆ ಪಂಚರಾದ ಸುರೇಶ್ ಮತ್ತು ಕೃಷ್ಣೇಗೌಡ ಇವರನ್ನು ಠಾಣೆಗೆ ಬರಲು ಹೇಳಿ, ಅವರು ಬಂದ ನಂತರ ಪ್ರಕರಣದ ಕುರಿತಂತೆ ಅವರಿಗೆ ತಿಳಿಸಿ, ಪಂಚರಾಗಲು ಕೇಳಿಕೊಂಡೆವು. ನಂತರ ಇಲಾಖಾ ವಾಹನದಲ್ಲಿ ಪಂಚರು, 1 ಮತ್ತು 5 ನೇ ಆರೋಪಿಗಳೊಂದಿಗೆ ಅವರು ಹೇಳಿದಂತೆ ಇಲಾಖಾ ವಾಹನದಲ್ಲಿ ಚಲಾಯಿಸಿಕೊಂಡು ಹೋಗಿ, ಕಡೆಕಾಲುವೆ ಹತ್ತಿರ ಅವರು ವಾಹನವನ್ನು ನಿಲ್ಲಿಸಲು ಹೇಳಿದಾಗ ಸದರಿ ವಾಹನವನ್ನು ನಿಲ್ಲಿಸಿರುತ್ತೇವೆ. ಸದರಿ ಕಾಲುವೆ ಹತ್ತಿರ ಇರುವ ಕಟ್ಟೆಯನ್ನು ತೋರಿಸಿದ್ದು, ಈ ಸ್ಥಳದಲ್ಲಿಯೇ ಹರೀಶನನ್ನು ಕೊಲೆ ಮಾಡಲಾಯಿತು ಎಂದು ತಿಳಿಸಿರುತ್ತಾರೆ. ಆ ಸ್ಥಳದ ಬಗ್ಗೆ ಪಂಚರ ಸಮಕ್ಷಮ ಮಹಜರ್ ಮಾಡಿ, ಸ್ಥಳದ ಕಚ್ಚಾ ನಕಾಶೆಯನ್ನು ಮಾಡಲಾಯಿತು. ಸದರಿ ಮಹಜರನ್ನು ಸಂಜೆ 5.30 ರಿಂದ 6.15 ರವರೆಗೆ ಮಾಡಲಾಯಿತು. ಸದರಿ ಮಹಜರನ್ನು ಈಗ ಸಾಕ್ಷಿಯು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ-17 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-17(ಬಿ) ಗುರುತಿಸಲಾಯಿತು. ಸದರಿ ಸ್ಥಳದ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ-61 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು

ಸಾಕ್ಷಿಯು ನೋಡಿ ಗುರುತಿಸಿದ್ದು ನಿಶಾನೆ ಪಿ-61(ಎ) ಎಂದು ಗುರುತಿಸಲಾಯಿತು.

13. ಅದೇ ದಿನ 1 ನೇ ಆರೋಪಿ ಅನಂತರಾಮೇಗೌಡ ನ ಹೇಳಿಕೆಯಂತೆ ಕೃತ್ಯ ಉಪಯೋಗಿಸಿದ ಓಮಿನಿ ಕಾರನ್ನು ಚಿಕ್ಕಮಗಳೂರಿನ ಆಟೋ ಲಿಂಕ್ಸ್ ನಲ್ಲಿ ಅಡ ಇಟ್ಟಿದ್ದು ನನೊಂದಿಗೆ ಬಂದರೆ ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ಅವನೊಂದಿಗೆ ಇಲಾಖಾ ಜೀಪಿನಲ್ಲಿ ಹೋಗಿ ಹನುಮಂತಪ್ಪ ಸರ್ಕಲ್ ನಲ್ಲಿ ಜೆ.ಡಿ.ಎಸ್ ಕಛೇರಿಯ ಮುಂದೆ ನಿಂತಿದ್ದ ಒಂದು ವಾಹನವನ್ನು ತೋರಿಸಿ ಇದೇ ವಾಹನವನ್ನು ನಾವು ಮೃತ ಹರೀಶನ ಶವವನ್ನು ಇಟ್ಟುಕೊಂಡು ಕೊಲೆ ಮಾಡಿದ ಸ್ಥಳದಿಂದ ಹೂತಿರುವ ಸ್ಥಳಕ್ಕೆ ಸಾಗಿಸಲು ಉಪಯೋಗಿಸಿದೆವು ಎಂದು ತಿಳಿಸಿರುತ್ತಾನೆ. ಆಟೋ ಲಿಂಕ್ಸ್ ನ ಡೀಲರ್ ಆದ ವಿಜಯ್ ಎಂಬುವವರು ಸದರಿ ವಾಹನವನ್ನು ಮತ್ತು 1 ನೇ ಆರೋಪಿಯನ್ನು ಗುರುತಿಸಿ ತಮ್ಮ ಆಟೋ ಲಿಂಕ್ಸ್ ನಿಂದಲೇ ಸದರಿ ವಾಹನವನ್ನು 1 ನೇ ಆರೋಪಿಯು ಖರೀದಿಸಿದ್ದು ಆದರೆ ವಾಹನವು ಆತನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರಲಿಲ್ಲ. ಮತ್ತೆ ಪುನಃ ಅದನ್ನು ಮಾರಾಟ ಮಾಡಲು ನಮ್ಮ ಬಳಿ ಬಿಟ್ಟು ಅದರ ಪ್ರತಿಯಾಗಿ ನಮ್ಮಿಂದ ರೂ.50,000 ಗಳನ್ನು ಪಡೆದುಕೊಂಡಿದ್ದನ್ನು ಎಂದು ತಿಳಿಸಿದನು.

14. ನಂತರ ಪಂಚರಾದ ಅರುಣ್ ಕುಮಾರ್ ಮತ್ತು ಮುಶ್ತಾಕ್ ರವರನ್ನು ಸ್ಥಳಕ್ಕೆ ಕರೆದುಕೊಂಡು ರಾತ್ರಿ 7 ಗಂಟೆಯಿಂದ 7.30 ಗಂಟೆಯವರೆಗೆ ಸದರಿ ವಾಹನವನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಳ್ಳಲಾಯಿತು ಮತ್ತು ಅದನ್ನು ಠಾಣಾ

ಮುದ್ದೆಮಾಲು ಪಟ್ಟಿ ಸಂಖ್ಯೆ- 45/2013 ರಲ್ಲಿ ದಾಖಲಿಸಿಕೊಳ್ಳಲಾಯಿತು. ನಂತರ ಇದರ ಬಗ್ಗೆ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಸದರಿ ವಾಹನ ಸಂಖ್ಯೆ- ಕೆಎ- 03 ಎಂ.ಇ- 9920 ಎಂದು ಇರುತ್ತದೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ-34 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-34(ಸಿ) ಎಂದು ಗುರುತಿಸಲಾಯಿತು.

15. ನಂತರ 1 ಮತ್ತು 5 ನೇ ಆರೋಪಿಗಳು ಮುಂದಿನ ತನಿಖೆಗೆ ಅವಶ್ಯಕತೆ ಇರುವುದಿಲ್ಲವಾದ ಕಾರಣ ರಿಮ್ಯಾಂಡ್ ಅರ್ಜಿಯೊಂದಿಗೆ ಸದರಿ ಆರೋಪಿಗಳೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

16. ನಂತರ ನಾನು ಠಾಣೆಗೆ ಮರಳಿದ ನಂತರ ಪಿ.ಸಿ. ಜಯಕುಮಾರ್ ರವರು ಶವವನ್ನು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತನ ಶವವನ್ನು ಅವನ ವಾರಸುದಾರರಾದ ತಂದೆಗೆ ಹಸ್ತಾಂತರಿಸಿದ ಬಗ್ಗೆ ನನಗೆ ವರದಿ ನೀಡಿರುತ್ತಾರೆ. ಅಲ್ಲದೇ ಸದರಿ ಜಯಕುಮಾರ್ ರವರು ಶವ ಪಂಚನಾಮೆ ಸಂದರ್ಭದಲ್ಲಿ ದೊರೆತ ಶವದ ಮೈಮೇಲಿದ್ದ ಮಾಸಲು ಗುಲಾಬಿ ಬಣ್ಣದ ಚಡ್ಡಿ ಮತ್ತು ಒಂದು ಕಪ್ಪು-ಬಿಳಿ ಮತ್ತು ಕೆಂಪು ಬಣ್ಣದ ದಾರಗಳಲ್ಲಿ ಕಟ್ಟಿದ ಒಂದು ತಾಮ್ರದ ಗುಂಡಿನಂತಿರುವ ತಾಯಿತವನ್ನು ವಶಪಡಿಸಿಕೊಂಡು ಅದನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅವುಗಳನ್ನು ಪಂಚರಾದ ಶಿವಕುಮಾರ್ ಮತ್ತು ಚಂದ್ರಶೇಖರ್ ರವರ ಸಮಕ್ಷಮ ರಾತ್ರಿ 9.30 ರಿಂದ

10.30 ರವರೆಗೆ ಠಾಣೆಯಲ್ಲಿಯೇ ಮಹಜರ್ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ:- 46/2013 ರಲ್ಲಿ ದಾಖಲಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ-18 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-18(ಸಿ) ಎಂದು ಗುರುತಿಸಲಾಯಿತು.

17. ಅಮಾನತ್ತುಪಡಿಸಿಕೊಂಡ ಶವದ ಮೇಲಿದ್ದ ಮಾಸಲು ಚಡ್ಡಿ ಮತ್ತು ತಾಯಿತವನ್ನು ಈಗ ತೋರಿಸಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುದ್ದೆಮಾಲು 2 ಮತ್ತು 3 ಎಂದು ಗುರುತಿಸಲಾಗಿದೆ. ನಂತರ 2, 3 ಮತ್ತು 4 ನೇ ಆರೋಪಿಗಳ ಪತ್ತೆಗಾಗಿ ಕಡೂರು ಪಿ.ಎಸ್.ಐ ಸಂತೋಷ್ ಶೆಟ್ಟಿರವರನ್ನು ನೇಮಿಸಲಾಯಿತು.

18. ದಿನಾಂಕಃ- 27-10-2013 ರಂದು ಬೆಳಗಿನ ಜಾವ 4 ಗಂಟೆಗೆ ನಾನು ಸಖರಾಯಪಟ್ಟಣ ಠಾಣೆಯಲ್ಲಿರುವಾಗ ಪಿ.ಎಸ್.ಐ ಸಂತೋಷ್ ಶೆಟ್ಟಿ ಮತ್ತು ಸಿಬ್ಬಂದಿಗಳು 2 ನೇ ಆರೋಪಿಯಾದ ಕೃಷ್ಣಮೂರ್ತಿ, 3 ನೇ ಆರೋಪಿಯಾದ ನಳಿನ್ ಕುಮಾರ್ ಮತ್ತು 4 ನೇ ಆರೋಪಿಯಾದ ಗೌಸ್ ಇವರನ್ನು ವಶಕ್ಕೆ ಪಡೆದುಕೊಂಡು ಬಂದು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿದರು. ನಂತರ ಇವರನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸ್ಸಿ, ಸದರಿ 3 ಆರೋಪಿಗಳ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

19. 2 ನೇ ಆರೋಪಿಯಾದ ಕೃಷ್ಣಮೂರ್ತಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ

" ನನ್ನೊಂದಿಗೆ ಬಂದರೆ ನಾನು ಹರೀಶನ ಬೈಕನ್ನು ನಿಲಿಸ್ಲಿದ ಸ್ಥಳವನ್ನು ಮತ್ತು ನಾವುಗಳು ಹರೀಶನನ್ನು ಹೊಡೆದು ಕೊಲೆ ಮಾಡಿರುವ ಜಾಗವನ್ನು ತೋರಿಸಿಕೊಡುತ್ತೇನೆ ಹಾಗೂ ನಾನು ಕೃತ್ಯ ಎಸಗಲು ಉಪಯೋಗಿಸಿದ ಮೊಬೈಲ್ ನನ್ನ ಜೇಬಿನಲಿಸ್ಲಿದ್ದು ಅದನ್ನು ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತಾನೆ "ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-62 ಎಂದು ಗುರುತಿಸಲಾಯಿತು.

20. ನಂತರ 3 ನೇ ಆರೋಪಿಯಾದ ನಳಿನ್ ಕುಮಾರ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ನನ್ನೊಂದಿಗೆ ಬಂದರೆ ನಾನು ಕೃತ್ಯಕ್ಕೆ ಉಪಯೋಗಿಸಿದ ವೀಲ್ ಸ್ಪಾನರ್ ನ್ನು ಬಿಸಾಡಿದ ಜಾಗವನ್ನು ಹಾಗೂ ಕೊಲೆ ಮಾಡಿರುವ ಜಾಗವನ್ನು ತೋರಿಸಿಕೊಡುತ್ತೇನೆ ಹಾಗೂ ನಾನು ಕೃತ್ಯ ಎಸಗಲು ಉಪಯೋಗಿಸಿದ ಮೊಬೈಲ್ ನನ್ನ ಜೇಬಿನಲ್ಲಿದ್ದು ಅದನ್ನು ಹಾಜರುಪಡಿಸುತ್ತೇನೆ "ಎಂದು ಹೇಳಿರುತ್ತಾನೆ. ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-63 ಎಂದು ಗುರುತಿಸಲಾಯಿತು.

21. ನಂತರ 4 ನೇ ಆರೋಪಿಯಾದ ಗೌಸ್ ಈತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ನಾನು ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ಪೈಪು ದೊಣ್ಣೆಯನ್ನು ಬಿಸಾಡಿದ ಜಾಗವನ್ನು ಹಾಗೂ ಕೊಲೆ ಮಾಡಿರುವ ಜಾಗವನ್ನು ತೋರಿಸಿಕೊಡುತ್ತೇನೆ "ಎಂದು ಹೇಳಿರುತ್ತಾನೆ. ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-64 ಎಂದು ಗುರುತಿಸಲಾಯಿತು.

22. ನಂತರ 2 ಮತ್ತು 3 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ಅವರು ಹಾಜರುಪಡಿಸಿದ ಮೊಬೈಲ್ ಗಳನ್ನು ಪಂಚರಾದ ಅನಿಲ್ ಕುಮಾರ್ ಮತ್ತು ಸತೀಶ್ ಇವರ ಸಮಕ್ಷಮ ಬೆಳಗಿನ 7.15 ಗಂಟೆಯಿಂದ 8 ಗಂಟೆಯವರೆಗೆ ಮಹಜರ್ ಪ್ರಕ್ರಿಯೆಯನ್ನು ಜರುಗಿಸಿ ಅವರು ಮೊಬೈಲ್ ಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಈಗಾಗಲೇ ನಿಶಾನೆ ಪಿ-19 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದುದ್ದು ಅದನ್ನು ನಿಶಾನೆ ಪಿ-19(ಸಿ) ಎಂದು ಗುರುತಿಸಲಾಯಿತು.

23. ಸದರಿ ಮಹಜರ್ ನ ಅಡಿಯಲ್ಲಿ ವಶಪಡಿಸಿಕೊಂಡ 2 ನೇ ಆರೋಪಿ ಕೃಷ್ಣಮೂರ್ತಿಯ ಮೊಬೈಲ್ ನಂಬರ್:- 9535595896 ಆಗಿರುತ್ತದೆ. ನಂತರ 3 ನೇ ಆರೋಪಿ ನಳಿನ್ ಕುಮಾರ್ ಇವರು ಹಾಜರುಪಡಿಸಿದ ಮೊಬೈಲ್ ನಲ್ಲಿ 2 ಸಿಮ್ ಗಳಿದ್ದು ಒಂದು ಏರ್ ಟೆಲ್ ಸಿಮ್ ಅದರ ಸಂಖ್ಯೆ- 9611201233 ಮತ್ತು ಇನ್ನೊಂದು ಬಿ.ಎಸ್.ಎನ್.ಎಲ್ ಸಿಮ್ ಆಗಿದ್ದು ಅದರ ಸಂಖ್ಯೆ- 9482319093 ಆಗಿರುತ್ತದೆ.

24. ಸದರಿ ಮಹಜರ್ ನಲ್ಲಿ ಸದರಿ ಮೊಬೈಲ್ ಗಳ ಐ.ಎಂ.ಇ.ಐ ಮತ್ತು ಸಿಮ್ ಗಳ ಯೂನಿಕ್ ನಂಬರ್ ಗಳನ್ನು ಕೂಡ ನಾನು ಸದರಿ ಮಹಜರ್ ನಲ್ಲಿ ಕಾಣಿಸಿರುತ್ತೇನೆ. ನಂತರ ಸದರಿ ಮಹಜರ್ ನ ಅಡಿ ವಶಪಡಿಸಿಕೊಂಡ ವಸ್ತುಗಳನ್ನು ಠಾಣಾ ಮುದ್ದೆಮಾಲು ಪಟ್ಟಿ ಸಂಖ್ಯೆ- 47/2013 ರಲ್ಲಿ ದಾಖಲಿಸಿಕೊಳ್ಳಲಾಯಿತು. ನಂತರ ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಈಗ ನ್ಯಾಯಾಲಯದ ಮುಂದೆ ಸೀಲಾದ

ಕವರ್ ನಲ್ಲಿದ್ದು ಅದನ್ನು ಆರೋಪಿತರು ಮತ್ತು ಉಭಯ ಪಕ್ಷದವರ ಸಮಕ್ಷಮ ತೆರೆಯಲಾಯಿತು. 3 ನೇ ಆರೋಪಿಯಿಂದ ವಶಪಡಿಸಿಕೂಂಡ ಮೊಬೈಲ್ ಸೆಟ್ ನ್ನು ಮತ್ತು ಅದರಲ್ಲಿರುವ ಸಿಮ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಮೊಬೈಲ್ ಹ್ಯಾಂಡ್ ಸೆಟ್ ನ್ನು ಮುದ್ದೆಮಾಲು 14 ಎಂದು, ಮತ್ತು ಅದರಲ್ಲಿದ್ದ ಒಂದು ಬಿ.ಎಸ್.ಎನ್.ಎಲ್ ಸಿಮ್ ನ್ನು ಮುದ್ದೆಮಾಲು 15 ಎಂದು ಹಾಗೂ ಒಂದು ಏರ್ ಟೆಲ್ ಸಿಮ್ ನ್ನು ಮುದ್ದೆಮಾಲು 16 ಎಂದು ಗುರುತಿಸಲಾಯಿತು. 2 ನೇ ಆರೋಪಿಯಾದ ಕೃಷ್ಣಮೂರ್ತಿ ಯವರಿಂದ ವಶಪಡಿಸಿಕೊಂಡ ಮೊಬೈಲ್ ಸೆಟ್ ಮತ್ತು ಅದರಲ್ಲಿರುವ ಸಿಮ್ ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮೊಬೈಲ್ ಸೆಟ್ ಎಂದು ಮುದ್ದೆಮಾಲು 17 ಎಂದು ಹಾಗೂ ಅದರಲ್ಲಿರುವ ಸಿಮ್ ನ್ನು ಮುದ್ದೆಮಾಲು 18 ಎಂದು ಗುರುತಿಸಲಾಯಿತು.

25. ನಂತರ ಇನ್ನುಳಿದ ಆರೋಪಿಗಳಾದ ತಬ್ರೀಸ್ ಮತ್ತು ತೇಜಸ್ ಇವರ ಪತ್ತೆಗಾಗಿ ನನ್ನ ನಿರ್ದೇಶನದ ಮೇರೆಗೆ ಬೆಂಗಳೂರಿಗೆ ಹೋದ ಪಿ.ಎಸ್.ಐ ಗಿರೀಶ್ ರವರು ಸದರಿ ಆರೋಪಿಗಳನ್ನು ಮತ್ತು ಅವರೊಂದಿಗಿದ್ದ ಕೃತ್ಯ ಬಳಸಿದ ಕಾರನ್ನು ವಶಪಡಿಸಿಕೊಂಡು ನನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ನಂತರ ಸದರಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಕ್ರಮ ಜರುಗಿಸಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

26. 6 ನೇ ಆರೋಪಿಯಾದ ತಬ್ರೀಸ್ ಈತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ನನ್ನೊಂದಿಗೆ ಬಂದರೆ ನಾವುಗಳು ಕೃತ್ಯಕ್ಕೆ

ಉಪಯೋಗಿಸಿದ ಕಬ್ಬಿಣದ ಪೈಪು, ದೊಣ್ಣೆಯನ್ನು ಬಿಸಾಡಿದ ಜಾಗವನ್ನು ಹಾಗೂ ಕೊಲೆ ಮಾಡಿರುವ ಜಾಗವನ್ನು ತೋರಿಸಿಕೊಡುತ್ತೇನೆ" ಎಂದು ಹೇಳಿರುತ್ತಾನೆ. ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-65 ಎಂದು ಗುರುತಿಸಲಾಯಿತು.

27. 7 ನೇ ಆರೋಪಿಯಾದ ತೇಜಸ್ ಈತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ನಾನು ಕೃತ್ಯ ಎಸಗಲು ಉಪಯೋಗಿಸಿದ ಮೊಬೈಲ್ ಸೆಟ್ ನನ್ನ ಬಳಿ ಇದ್ದು ಹಾಜರುಪಡಿಸುತ್ತೇನೆ." ಎಂದು ಹೇಳಿರುತ್ತಾನೆ. ಅದನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಪಿ-66 ಎಂದು ಗುರುತಿಸಲಾಯಿತು.

28. ನಂತರ 7 ನೇ ಆರೋಪಿ ತೇಜಸ್ ಮತ್ತು ಇತರರು ಕೊಲೆ ಮಾಡುವ ಸಂಬಂಧ ಬೆಂಗಳೂರಿನಿಂದ ಸ್ಥಳಕ್ಕೆ ಬರಲು ಬಳಸಿದ ಕಾರು ನಂಬರ್:- ಕೆಎ:- 02 ಎ.ಡಿ:- 697 ಇಂಡಿಕಾ ಕಾರ್ ನ್ನು ಮತ್ತು ಆತನು ಹಾಜರುಪಡಿಸಿದ ಟಚ್ ಸ್ಕ್ರಿನ್ ನೊಕಿಯಾ ಮೊಬೈಲ್ ಹ್ಯಾಂಡ್ ಸೆಟ್ ಮತ್ತು ಅದರಲ್ಲಿದ್ದ ಸಿಮ್ ನ ಮೊಬೈಲ್ ನಂಬರ್:- 9916492986 ಅನ್ನು ಪಂಚರ ಸಮಕ್ಷಮ ಬೆಳಿಗ್ಗೆ 10.45 ರಿಂದ 11.45 ರವರೆಗೆ ನಿಶಾನೆ ಪಿ-20 ಅಡಿಯಲ್ಲಿ ಅಮಾನತ್ತುಪಡಿಸಿಕೊಳ್ಳಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-20(ಸಿ) ಎಂದು ಗುರುತಿಸಲಾಯಿತು.

29. ಸದರಿ ಮಹಜರಿನಲ್ಲಿ ಮೊಬೈಲ್ ನ ಐ.ಎಂ.ಇ.ಐ ನಂಬರ್ ನ್ನು ಮತ್ತು ಸಿಮ್ ನ ಯುೂನಿಕ್ ನಂಬರ್ ನ್ನು ಕಾಣಿಸಿರುತ್ತೇನೆ. ಸದರಿ ವಶಪಡಿಸಿಕೊಂಡ ವಸ್ತುಗಳನ್ನು ಈಗ ನ್ಯಾಯಾಲಯದ ಮುಂದೆ

ನೋಡುತ್ತಿದ್ದು ಅವು ಸೀಲದ ಕವರ್ ನಲ್ಲಿ ಇದ್ದು, ಆರೋಪಿತರು ಮತ್ತು ಉಭಯ ಪಕ್ಷದವರ ಸಮಕ್ಷಮ ತೆರೆಯಲಾಯಿತು. ಅದರಲ್ಲಿದ್ದ ಮೊಬೈಲ್ ಸೆಟ್ ಮತ್ತು ಸಿಮ್ ನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಸದರಿ ಮೊಬೈಲ್ ಸೆಟ್ ನ್ನು ಮುದ್ದೆಮಾಲು 19 ಎಂದು ಹಾಗೂ ಸಿಮ್ ನ್ನು ಮುದ್ದೆಮಾಲು 20 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ರಜಿ

ದಿನಾಂಕಃ 17-11-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದು ವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -</u>

30. ಅದೇ ದಿನ 2 ನೇ ಆರೋಪಿ ಕೃಷ್ಣಮೂರ್ತಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದ ಆಗೆ ಮೃತ ಬೈಕ್ ನ್ನು ಬಚ್ಚಿಟ್ಟ ಸ್ಥಳವನ್ನು

ತೋರಿಸುವುದಾಗಿ ಹೇಳಿದ್ದರಿಂದ ಪಂಚರಾದ ಲಕ್ಷ್ಮೇಮೇ ಗೌಡ, ಕೃಷ್ಣಗೌಡ ಇವರೊಂದಿಗೆ ಮತ್ತು ಆರೋಪಿಯೊಂದಿಗೆ ನಾವು ಸಖರಾಯಪಟ್ಟಣ ಪೊಲೀಸ್ ಠಾಣೆಯಿಂದ ಹೊರಟು ಕೆ.ಎಂ. ರಸ್ತೆಯ ಕಣಿವೆ ಆಂಜನೆಯ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಂದ ಆಂಜನೆಯ ದೇವಸ್ಥಾನದ ಪೂರ್ವ ದಿಕ್ಕಿನಲ್ಲಿ ಇದ್ದ ಬ್ರಹ್ಮ ಸಮುದ್ರ ಅರಣ್ಯದ ಒಳಗೆ ಕರೆದುಕೊಂಡು ಹೋದನು. ಮತ್ತು ಅಲ್ಲಿ ಬೈಕ್ ಇದ್ದ ಸ್ಥಳವನ್ನು ತೋರಿಸಿದನು. ಸದರಿ ಬೈಕ್ ನ್ನು ಪರಿಶೀಲಿಸಲಾಗಿ ಹಿರೋ ಹೋಂಡಾ ಬೈಕ್ ಆಗಿದ್ದು ಅದರ ನಂಬರ್ ಕೆ.ಎ.18/ಆರ್.59 ಆಗಿರುತ್ತದೆ. ಸದರಿ ಬೈಕ್ ನ್ನು ಮದ್ಯಾಹ್ನ 12.30 ರಿಂದ 1.30 ರವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ ಅದನ್ನು ವಶಪಡಿಸಿಕೊಳ್ಳಲಾಯಿತು. ಸದರಿ ಮಹಜರ್ ನ್ನು ಈಗಾಗಲೇ ನಿ.ಪಿ.24 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸದರಿ ಸಾಕ್ಷಿಯ ಸಹಿಯನ್ನು ನಿ.ಪಿ.24(ಸಿ) ಎಂದು ಗುರುತಿಸಲಾಯಿತು. ಮತ್ತು ಅದೇ ಸ್ಥಳದಲ್ಲಿ ಬೈಕ್ ಬಿದ್ದಿದ್ದ ಸ್ಥಳದ ಪೋಟೋ ವನ್ನು ಸಹ ತೆಗೆಯಲಾಯಿತು. ಅದನ್ನು ಈಗಾಗಲೇ ನಿ.ಪಿ.26 ಎಂದು ಗುರುತಿಸಲಾಗಿದೆ. ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಠಾಣೆಗೆ ಮರಳಿ ಬಂದು ನಾವು ವಶಪಡಿಸಿಕೊಂಡ ಬೈಕ್ ನ್ನು ಠಾಣಾ ಮುದ್ದೆ ಮಾಲು

ಪಟ್ಟಿಯಲ್ಲಿ ನಮೂದಿಸಿ ನಂತರ ಅದನ್ನು ನ್ಯಾಯಾಲಯಕ್ಕೆ ನಮೂದಿಸಿಕೊಂಡೆವು.

31. ಆರೋಪಿ 4, 6 ಮತ್ತು 7 ಇವರುಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಎಸೆದಿರುವ ಜಾಗವನ್ನು ತೋರಿಸಿರುತ್ತೇವೆ ಎಂದು ಹೇಳಿದ ಮೇರೆಗೆ ನಾವು ಪಂಚರನ್ನು ಕರೆದುಕೊಂಡು ಸದರಿ ಆರೋಪಿಗಳೊಂದಿಗೆ ಅವರು ಹೇಳಿದ ಕೆ.ಎಂ. ರಸ್ತೆಯ ಪಕ್ಕದಲ್ಲಿ ಕುರಿ ದೊಡ್ಡಿಯ ಮಣ್ಣಿನ ರಸ್ತೆಯ ಬಳಿ ಹೋದೆವು. ನಂತರ ಅಲ್ಲಿದ್ದ ಅರಣ್ಯದ ಗಿಡ ಗಂಟಿಗಳಲ್ಲಿ ಎಸೆದಿದ್ದ ಒಂದು ಕಾಡು ಜಾತಿಯ ಒಂದು ದೊಣ್ಣೆಯನ್ನು 6 ನೇ ಆರೋಪಿ ತಬರೀಜ್ ಈತನು ತೆಗೆದು ತೋರಿಸಿದನು. ಅದೇ ಜಾಗದಿಂದ ಸ್ವಲ್ಪ ಪಕ್ಕದಲ್ಲಿ ಮುಳ್ಳಿನ ಗಿಡದಲ್ಲಿ ಎಸೆದಿದ್ದ ಒಂದು ಕಬ್ಬಿಣದ ಪೈಪ್ ನ್ನು 4 ನೇ ಆರೋಪಿ ಗೌಸ್ ತೆಗೆದು ತೋರಿಸಿ ಇದೇ ಪೈಪ್‌ನಿಂದ ಮೃತ ಹರೀಶನಿಗೆ ಹೊಡೆದಿದ್ದು ಎಂದು ಹೇಳಿರುತ್ತಾನೆ. ಸದರಿ ದೊಣ್ಣೆ ಮತ್ತು ಕಬ್ಬಿಣದ ಪೈಪ್ ನ್ನು ಪಂಚರ ಸಮಕ್ಷಮ ಮಹಜರ್ ನ್ನು ಮಧ್ಯಾಹ್ನ 2 ರಿಂದ 3 ಗಂಟೆ ವರೆಗೆ ಜರುಗಿಸಿ ಮತ್ತು ಅವುಗಳ ಫೋಟೋ ಗಳನ್ನು ಸಹ ತೆಗೆಯಲಾಯಿತು. ಸದರಿ ಮಹಜರ್ ನ್ನು ಈಗಾಗಲೇ ನಿ.ಪಿ.25 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸದರಿ ಸಾಕ್ಷಿಯ ಸಹಿಯನ್ನು ನಿ.ಪಿ.25(ಸಿ) ಎಂದು

ಗುರುತಿಸಲಾಯಿತು. ಆ ಸ್ಥಳದಲ್ಲಿ ಕಬ್ಬಿಣದ ಪೈಪ್ ಇರುವ ಫೋಟೋವನ್ನು ಸಹ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿ.ಪಿ.27 ಎಂದು ಗುರುತಿಸಲಾಗಿದೆ. ಮತ್ತು ಕಾಡು ಜಾತಿಯ ಮರದ ದೊಣ್ಣೆಯ ಫೋಟೋವನ್ನು ಸಹ ಆ ಸಂದರ್ಭದಲ್ಲಿ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.67 ಎಂದು ಗುರುತಿಸಲಾಯಿತು. ಈಗ ದೊಣ್ಣೆ ಮತ್ತು ಕಬ್ಬಿಣದ ಪೈಪ್ ನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.6 ಮತ್ತು 8 ಎಂದು ಗುರುತಿಸಲಾಗಿದೆ.

32. ನಂತರ ಮೇಲ್ಕಂಡ ವಸ್ತುಗಳನ್ನು ವಶಪಡಿಸಿಕೊಂಡು ಠಾಣೆಗೆ ಬಂದು ಠಾಣಾ ಮುದ್ದೆ ಮಾಲು ಪಟ್ಟಿಯಲ್ಲಿ ಪಿ.ಎಫ್. ನಂಬರ್ 50/2013 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

33. ನಂತರ ಅದೇ ದಿನ 3 ನೇ ಆರೋಪಿ ನಳೀನ್ ಕುಮಾರ್ ಈತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ಕೃತ್ಯಕ್ಕೆ ಬಳಸಿದ Wheel Spanner ನ್ನು ಇಟ್ಟಿರುವ ಜಾಗ ಮತ್ತು ಮೃತ ಹರೀಶನನ್ನು ಕೊಲೆ ಮಾಡಿದ ಜಾಗವನ್ನು ತೋರಿಸುತ್ತೇನೆ ಎಂದು ಹೇಳಿದರೆ ಮೇರೆಗೆ ನಮ್ಮನ್ನು ಮತ್ತು ಪಂಚರನ್ನು ಆರೋಪಿಯು ಕೆಂಕೇರಿ ಗ್ರಾಮದ ಕಡೆ ಕಾಲುವೆ ಎಂಬಲ್ಲಿ ಶ್ರೀನಿವಾಸ್ ಪುರಕ್ಕೆ ಹೋಗುವ

ಮಣ್ಣಿನ ರಸ್ತೆಯಲ್ಲಿ ಉತ್ತರ ದಿಕ್ಕಿನಲ್ಲಿ ಇರುವ ಈರೇಗೌಡರ ಜಮೀನಿನ ಹತ್ತಿರ ಕರೆದುಕೊಂಡು ಹೋಗಿ ಆ ಜಮೀನಿನ ಬದುವಿನಲ್ಲಿ ಬೆಳೆದಿದ್ದ ಗಿಡ ಮತ್ತು ಬಳ್ಳಿ ಮಧ್ಯೆ ಒಂದು Wheel Spanner ನ್ನು ತೆಗೆದು ತೋರಿಸಿ ಇದರಿಂದಲೇ ಮೃತ ಹರೀಶನನ್ನು ಹೊಡೆದು ಕೊಂದಿರುವುದಾಗಿ ತಿಳಿಸಿರುತ್ತಾರೆ. ಸದರಿ Wheel Spanner ನ್ನು ಪಂಚರ ಸಮಕ್ಷಮ ಸಂಜೆ 4 ರಿಂದ 5 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಅಲ್ಲಿಂದ ಸುಮಾರು 150 ಅಡಿ ದೂರಕ್ಕೆ ಕರೆದುಕೊಂಡು ಹೋಗಿ ಕಡೆ ಕಾಲುವೆ ಸಿಮೆಂಟ್ ಕಟ್ಟೆಯನ್ನು ತೋರಿಸಿ ಇದೇ ಜಾಗದಲ್ಲಿ ಮೃತ ಹರೀಶನನ್ನು ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿದನು. ಸದರಿ ಮಹಜರ್ ನ್ನು ಈಗಾಗಲೇ ನಿ.ಪಿ.21 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.21(ಸಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ Wheel Spanner ಇದರ ಫೋಟೋವನ್ನು ತೆಗೆದಿದ್ದು ಅದನ್ನು ನೋಡಿದರೆ ಈಗ ಗುರುತಿಸುತೇನೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.23 ಎಂದು ಗುರುತಿಸಲಾಗಿದೆ. 3 ನೇ ಆರೋಪಿಯು ತೋರಿಸಿದ ಕೊಲೆ ಮಾಡಿದ ಸ್ಥಳವನ್ನು ಸಹ ಫೋಟೋ ತೆಗೆದಿದ್ದು ಅದನ್ನು

ನೋಡಿದರೆ ಗುರುತಿಸುತ್ತೇನೆ. ಸದರಿ ಪೋಟೋ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.68 ಎಂದು ಗುರುತಿಸಲಾಯಿತು. ಸದರಿ Wheel Spanner ನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಲಾಗಿದೆ. ನಂತರ ಮೇಲೆ ತಿಳಿಸಿದ ಮು.ಮಾ.7 ನ್ನು ವಶಪಡಿಸಿಕೊಂಡು ಠಾಣೆಗೆ ಬಂದು ಠಾಣಾ ಮುದ್ದೆ ಮಾಲು ಪಟ್ಟಿ 51/2013 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

34. ನಂತರ ಸದರಿ ಆರೋಪಿಗಳ ಮುಂದಿನ ತನಿಖೆಗೆ ಅವಶ್ಯವಿಲ್ಲುದ್ದರಿಂದ ಪ್ರತಿಪೇಕ್ಷಣ ವರದಿ ಸಲ್ಲಿಸಿ ಅವರನ್ನು ಸಿಬ್ಬಂದಿಗಳ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾಸಾ.15 , ಫ್ರಾಸಾ.16 , ಫ್ರಾಸಾ.17 ಮತ್ತು ಫ್ರಾಸಾ.32 ಇವರನ್ನು ಠಾಣೆಗೆ ಕರೆಸಿ ಅವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು.

35. ದಿಃ 27.10.2013 ರಂದು ಫ್ರಾಸಾ.32 ನನ್ನ ಸಮಕ್ಷಮ ನಿ.ಪಿ. 49 ಮತ್ತು 49(ಎ) ಪ್ರಕಾರ ಹೇಳಿಕೆ ನೀಡಿರುತ್ತಾರೆ.

36. ದಿಃ 28.10.2013 ರಂದು ಸಾಕ್ಷಿದಾರರಾದ ಚಾಸಾ.27-ಗೌರಮ್ಮ ಮತ್ತು ಚಾಸಾ.28- ತಿಮ್ಮೇಗೌಡ ಇವರನ್ನು ಠಾಣೆಗೆ ಕರೆಸಿ ಅವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು

ಪಡೆದುಕೊಳ್ಳಲಾಯಿತು.

37. ನಂತರ ನಾನು ಬಿಳೇಕಲ್ಲಳ್ಳಿ , ಗುಂಗರಹಳ್ಳಿ ಸರ್ಪನಹಳ್ಳಿ ಗ್ರಾಮಗಳಿಗೆ ತೆರೆಳಿ ಸಾಕ್ಷಿದಾರರಾದ ಚಾಸಾ.29 - ನಾಗರಾಜ, ಚಾಸಾ.30 - ಬಿ.ಎಲ್. ತಿಮ್ಮೇಗೌಡ, ಚಾಸಾ.31 - ಶಾರದಮ್ಮ, ಚಾಸಾ.32 - ಜ್ಯೋತಿ ಇವರ ಹೇಳಿಕೆಗಳನ್ನು ಪಡೆದು-ಕೊಳ್ಳಲಾಯಿತು. ಚಾಸಾ.31 / ಪ್ರಾಸಾ.22 ಶಾರದಮ್ಮ ಇವರು ನನ್ನ ಮುಂದೆ ನಿ.ಪಿ.36 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. (ಸದರಿ ಪ್ರಾಸಾ.22 ಶಾರದಮ್ಮ ಇವರ ಸಾಕ್ಷ್ಯದಲ್ಲಿ ಸದರಿ ಹೇಳಿಕೆಯ ಬಗ್ಗೆ ನಿ.ಪಿ.36 ಎಂದು ಕಂಡು ಬಂದಿರುವುದಿಲ್ಲ, ಆದರೆ ಕಡತ ಪರಿಶೀಲಿಸಲಾಗಿ ಸದರಿ ಸಾಕ್ಷಿಯ 161 ರ ಹೇಳಿಕೆಯಲ್ಲಿ ಸದರಿ ಭಾಗವನ್ನು ನಿ.ಪಿ.36 ಎಂದು ಗುರುತಿಸಿ ಅದರ ಮೇಲೆ ಹಿಂದಿನ ಪೀಠಾಸೀನಾಧಿಕಾರಿಗಳ ಸಹಿ ಇರುತ್ತದೆ.)

38. ಸಾಕ್ಷಿದಾರರಾದ ಪ್ರಾಸಾ.18 ಬಿ.ಎನ್. ತಿಮ್ಮೇಗೌಡ ನನ್ನ ಸಮಕ್ಷಮ ನಿ.ಪಿ.29 ರಂತೆ ಹೇಳಿಕೆ ನೀಡಿರುತ್ತಾರೆ. ನಂತರ ಕಡೂರು ಪಟ್ಟಣಕ್ಕೆ ಬಂದು ಸಾಕ್ಷಿದಾರರಾದ ಚಾಸಾ.33 – ಗೋವಿಂದರಾಜು, ಚಾಸಾ.34 - ರಂಗಸ್ವಾಮಿ ಮತ್ತು ಚಾಸಾ.35 - ಕೆಂಚಪ್ಪ ಇವರುಗಳನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

39. ದಿಃ 29.10.2013 ರಂದು ಸಾಕ್ಷಿದಾರರಾದ ಚಾಸಾ.46 ರಿಂದ ಚಾಸಾ.51 ರವರುಗಳನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 30.10.2013 ರಂದು

ಚಿಕ್ಕಮಗಳೂರಿಗೆ ಭೇಟಿ ನೀಡಿ ಸಾಕ್ಷಿದಾರರಾದ ಪ್ರಾಸಾ.19- ಜಗದೀಶ್, ಪ್ರಾಸಾ.20 – ವಿಜಯ್, ಚಾಸಾ.38 - ಮಹಮದ್ ಇಕ್ಬಾಲ್ ಇವರುಗಳನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಪ್ರಾಸಾ.19- ಜಗದೀಶ್ ನನ್ನ ಸಮಕ್ಷಮ ನಿ.ಪಿ.31 ರಿಂದ ನಿ.ಪಿ.33 ರವರೆಗಿನ ಪ್ರಕಾರ ಹೇಳಿಕೆ ನೀಡಿರುತ್ತಾರೆ. ಸದರಿ ಪ್ರಾಸಾ.19- ಜಗದೀಶ್ ರವರು 1 ನೇ ಆರೋಪಿ ಅನಂತರಾಮೇಗೌಡ ಇವರಿಗೆ ಕೆ.ಎ.03/ಎಂ.ಇ.9920 ಮಾರುತಿ ಒಮಿನಿ ವಾಹನವನ್ನು ನೀಡಿದ್ದರ ಕುರಿತಂತೆ ಡೆಲಿವರಿ ನೋಟ್ ನ್ನು ನಾನು ಅವರಿಂದ ಪಡೆದುಕೊಂಡಿರುತ್ತೇನೆ. ಅದನ್ನು ಈಗಾಗಲೇ ನಿ.ಪಿ.30 ಎಂದು ಗುರುತಿಸಲಾಗಿದೆ. ಸದರಿ ಡೆಲಿವರಿ ನೋಟ್ ನಲ್ಲಿ 1 ನೇ ಆರೋಪಿಯು ವಾಹನವನ್ನು ತೆಗೆದುಕೊಂಡಿದ್ದರ ಬಗ್ಗೆ ಸಹಿಯನ್ನು ಮಾಡಿದ್ದು ಆ ಆರೋಪಿಯ ಸಹಿಯನ್ನು ಈ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಎದುರುದಾರ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ.31(ಎ) ಎಂದು ಗುರುತಿಸಲಾಯಿತು. ನಿ.ಪಿ.30 ಡೆಲಿವರಿ ನೋಟ್ ನ್ನು ನಾನು ಸ್ವೀಕರಿಸಿದ್ದರ ಕುರಿತು ಸಹಿಯನ್ನು ಮಾಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.30(ಬಿ) ಎಂದು ಗುರುತಿಸಲಾಯಿತು.

40. ಮೇಲೆ ಹೇಳಿದ ವಾಹನದ ಮುಂಖಾಂತರವೇ 1 ನೇ ಆರೋಪಿಯು ಮೃತ ಹರೀಶನನ್ನು ಕೊಲೆ ಮಾಡಿದ್ದ ಸ್ಥಳದಿಂದ ಹೂತಿಟ್ಟ ಸ್ಥಳಕ್ಕೆ ಆತನ ಮೃತ ದೇಹವನ್ನು ಸಾಗಿಸಿರುತ್ತಾನೆ.

41. ದಿಃ 01.11.2013 ರಂದು ಸಾಕ್ಷಿ ಫ್ರಾಸಾ.16 - ಅಜಯ್ ರವರು ಠಾಣೆಗೆ ಹಾಜರಾಗಿ ಮೃತ ಹರೀಶನು ಕೊಲೆಯಾಗುವ ಸಂದರ್ಭದಲ್ಲಿ ಬಳಸಿದ್ದ ಮೊಬೈಲ್ ಹ್ಯಾಂಡ್ ಸೆಟ್ ನನ್ನದು ಇರುತ್ತದೆ. ಮತ್ತು ಅದನ್ನು ಖರೀದಿಸಿದ ಬಿಲ್ಲು ಸಹ ಇದ್ದು ಅದನ್ನು ನನ್ನ ವಶಕ್ಕೆ ನೀಡಿರುತ್ತಾರೆ. ಸದರಿ ಬಿಲ್ಲನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.28 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ನಿ.ಪಿ.28 ನ್ನು ಠಾಣೆಯಲ್ಲಿ ಪಂಚರಾದ ಮೋಹನ್ ಮತ್ತು ಪುಟ್ಟಸ್ವಾಮಯ್ಯ ರವರ ಸಮಕ್ಷಮ ಸಂಜೆ 4 ರಿಂದ 4.30 ರವರೆಗೆ ಮಹಜರ್ ಕ್ರಮ ಜರುಗಿಸಿ ಅದನ್ನು ಠಾಣಾ ಮುದ್ದೆ ಮಾಲು ಪಟ್ಟಿ ಸಂಖ್ಯೆ 52/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು, ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.37 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.37(ಬಿ) ಎಂದು ಗುರುತಿಸಲಾಯಿತು. ಫ್ರಾಸಾ.16 - ಅಜಯ್ ನು ಮೃತ ಹರೀಶನ ಅಕ್ಕನ ಮಗನಾಗಿರುತ್ತಾನೆ. ಸದರಿ ಮೊಬೈಲ್ ನ್ನು ಖರೀದಿಸಿದ ಫ್ರಾಸಾ.24 - ಸಂತೋಷ್ ಕುಮಾರ್ ಮತ್ತು ಫ್ರಾಸಾ.16 - ಅಜಯ್ ರವರು ದಾಯಾದಿಗಳಾಗಿರುತ್ತಾರೆ. ಸದರಿ ಫ್ರಾಸಾ.24 - ಸಂತೋಷ್ ಕುಮಾರ್ ಈತನು ಬೆಂಗಳೂರಿನ ಫೋರಂ ಮಾಲ್ ನಲ್ಲಿ ಕೆಲಸ ಮಾಡುತ್ತಿದ್ದು ಫ್ರಾಸಾ.16 – ಅಜಯ್ ನು ತನಗೆ ಒಂದು ಮೊಬೈಲ್ ಬೇಕು ಎಂದು ಕೇಳಿದಾಗ ಡಿಸೆಂಬರ್

2012 ನೇ ಇಸವಿಯಲ್ಲಿ ಸದರಿ ಪ್ರಾಸಾ.24 - ಸಂತೋಷ್ ಕುಮಾರ್ ಪ್ರಾಸಾ.16 - ಅಜಯ್ ಗೆ ಮೊಬೈಲ್ ಖರೀದಿ ಮಾಡಿ ಕೊಟ್ಟಿರುತ್ತಾನೆ. ನಿ.ಪಿ.28 ರಲ್ಲಿ ಮೃತ ಹರೀಶನು ಬಳಸುತ್ತಿದ್ದ ಮೊಬೈಲ್ ನ ಐ.ಎಂ.ಇ.ಐ ನಂಬರ್ ಇರುತ್ತದೆ. 5 ನೇ ಆರೋಪಿ ಜಬೀಉಲ್ಲಾ ತನ್ನ 9060906029 ಈ ನಂಬರಿನ ಸಿಮ್ ನ್ನು ಮೇಲೆ ಹೇಳಿದ ಮೊಬೈಲ್ ನ ಐ.ಎಂ.ಇ.ಐ ನಂಬರ್ ಇರುವ ಸೆಟ್ ಗೆ ಹಾಕಿಕೊಂಡಿದ್ದು, ಮೃತ ಹರೀಶನು ಕಾಣೆಯಾದ ತರುವಾಯ ದಿಃ 16.09.2013 ಮತ್ತು 17.09.2013 ರಂದು ಪೋನ್ ನ್ನು ಉಪಯೋಗಿಸಿದ್ದು ಕಂಡು ಬರುತ್ತದೆ.

42. ಅದೇ ದಿನ ಅಂದರೆ ದಿಃ 01.11.2013 ರಂದು ಪ್ರಾಸಾ.24 - ಸಂತೋಷ್ ಕುಮಾರ್ ರವರು ಪ್ರಾಸಾ.16 - ಅಜಯ್ ರವರೊಂದಿಗೆ ಠಾಣೆಗೆ ಹಾಜರಾಗಿದ್ದು ಅವರ ಹೇಳಿಕೆಯನ್ನು ಸಹ ಪಡೆದುಕೊಳ್ಳಲಾಯಿತು.

43. ದಿಃ 11.11.2013 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಪ್ರಾಸಾ.34 ರವರಿಗೆ ಮನವಿ ಮಾಡಲಾಯಿತು. ಅದೇ ದಿನ ಈ ಪ್ರಕರಣದಲ್ಲಿ ಬಳಸಿದ್ದ ಮೊಟರ್ ಬೈಕ್ ನಂಬರ್ ಕೆ.ಎ.18/ಆರ್.59, ಕೆ.ಎ.03/ಎಂ.ಇ.9920 ಇವುಗಳಿಗೆ ಸಂಬಂಧಿಸಿದ ಬಿ.ಎಕ್ಸ್ ಟ್ರಾಕ್ಟ್ ನೀಡಲು ಚಿಕ್ಕಮಗಳೂರಿನ ಆರ್.ಟಿ.ಒ ಕಚೇರಿಗೆ ಮನವಿ ಮಾಡಲಾಯಿತು. ನಂತರ ಇಂಡಿಕಾ ಕಾರ್ ನಂಬರ್

ಕೆ.ಎ.02/ಎ.ಡಿ.697 ಇದರ ಬಿ.ಎಕ್ಸ್ ಟ್ರಾಕ್ಟ್ ನೀಡಲು ಬೆಂಗಳೂರು ವೆಸ್ಟ್ ಆರ್.ಟಿ.ಒ ಕಚೇರಿಗೆ ಮನವಿ ಮಾಡಲಾಯಿತು. ಆರೋಪಿಗಳ ಮತ್ತು ಮೃತ ಹರೀಶನ ಮೊಬೈಲ್ ಗಳ ಸಿ.ಡಿ.ಆರ್. ಮತ್ತು ಸಿ.ಎ.ಎಫ್ ಇವುಗಳನ್ನು ನೀಡಲು ಕೋರಿ ಎಸ್.ಪಿ. ರವರಿಗೆ ಮನವಿ ಸಲ್ಲಿಸಲಾಯಿತು.

44. ದಿಃ 12.11.2013 ರಂದು ಬಾಣೂರು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಠಾಣಾ ಹೆಚ್.ಸಿ. ರಮೇಶಪ್ಪ ರವರು ಮೃತ ಹರೀಶನ ವೈದ್ಯಕೀಯ ಪರೀಕ್ಷೆಯ ಸಮಯದಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ತಂದು ಹಾಜರು ಪಡಿಸಿದ್ದು ಅವುಗಳನ್ನು ಪಂಚರಾದ ಪರಮೇಶ್ವರಪ್ಪ ಮತ್ತು ಕುಮಾರಸ್ವಾಮಿ ಇವರುಗಳ ಸಮಕ್ಷಮ ಸಂಜೆ 4 ರಿಂದ 4.45 ಗಂಟೆ ರವರೆಗೆ ಮಹಜರ್ ಕ್ರಮ ಜರುಗಿಸಿ ಅವುಗಳನ್ನು ವಶಪಡಿಸಿಕೊಳ್ಳಲಯಿತು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.38 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.38(ಡಿ) ಎಂದು ಗುರುತಿಸಲಾಯಿತು. ಸದರಿ ನಿ.ಪಿ.38 ರ ಅನ್ವಯ ವಶಪಡಿಸಿಕೊಂಡ ವಸ್ತುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ತಲೆ ಬುರಡೆ ಮತ್ತು ದವಡೆ ಇದನ್ನು ಮುಮಾ.21 ಎಂದು, ಮೃತ ದೇಹ ಬಿದ್ದ ಜಾಗದ ತಲೆಯ ಭಾಗ, ಕಾಲು ಭಾಗ, ಎಡ ಮತ್ತು ಬಲ ಭಾಗದಿಂದ ಮಣ್ಣನ್ನು ಸಂಗ್ರಹಿಸಿ ಶೇಕರಣೆ ಮಾಡಿ ಇಟ್ಟ 4 ಪ್ಲಾಸ್ಟಿಕ್ ಬಾಟಲಿಯನ್ನು ಈಗ

ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ಮುಮಾ.22 ರಿಂದ ಮು.ಮಾ.25 ಎಂದು ಗುರುತಿಸಲಾಯಿತು. ನಂತರ ದಿಃ 12.11.2013 ರಂದು ಹೆಚ್.ಸಿ. ರಮೇಶಪ್ಪ ರವರು ಮೃತ ಹರೀಶನ ಪಿ.ಎಂ. ವರದಿಯನ್ನು ತಂದು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೇನೆ. ಅದನ್ನು ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.41 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.41(ಸಿ) ಎಂದು ಗುರುತಿಸಲಾಯಿತು. ನಂತರ ಸದರಿ ಹೆಚ್.ಸಿ. ರಮೇಶಪ್ಪ ರವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

45. ದಿಃ 13.11.2013 ರಂದು ಆರ್.ಟಿ.ಒ ಚಿಕ್ಕಮಗಳೂರು ರವರಿಂದ ವಾಹನಗಳಾದ ಕೆ.ಎ.18/ಆರ್.59 ಮತ್ತು ಕೆ.ಎ.03/ಎಂ.ಇ.9920 ಸಂಬಂಧಿಸಿದ ಬಿ.ಎಕ್ಸ್ ಟ್ರಾಕ್ಟ್ ನ್ನು ಸ್ವೀಕರಿಸಲಾಯಿತು. ಸದರಿ ವಾಹನಗಳಿಗೆ ಸಂಬಂಧಿಸಿದಂತೆ ಆರ್.ಟಿ.ಒ ಚಿಕ್ಕಮಗಳೂರು ರವರಿಗೆ ಬಿ.ಎಕ್ಸ್ ಟ್ರಾಕ್ಟ್ ನೀಡಲು ಮನವಿ ಪ್ರತಿ ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.69 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.69(ಎ) ಎಂದು ಗುರುತಿಸಲಾಯಿತು. ಆರ್.ಟಿ.ಒ ಚಿಕ್ಕಮಗಳೂರು ಇವರು ಮೃತನ ವಾಹನ ಕೆ.ಎ.18/ಆರ್.59 ದ ಬಿ.ಎಕ್ಸ್ ಟ್ರಾಕ್ಟ್ ನ್ನು ನೀಡಿದ್ದು ಅದನ್ನು ಈಗ ನೋಡುತಿದ್ದು ಅದನ್ನು ನಿ.ಪಿ.70

ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.70(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ಬಳಸುತ್ತಿದ್ದ ಕೆ.ಎ.03/ಎಂ.ಇ.9920 ವಾಹನದ ಬಿ.ಎಕ್ಸ್ ಟ್ರಾಕ್ಟ್ ನ್ನು ಈಗ ನೋಡುತಿದ್ದು ಅದನ್ನು ನಿ.ಪಿ.71 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.71(ಎ) ಎಂದು ಗುರುತಿಸಲಾಯಿತು.

46. ದಿಃ 27.11.2013 ರಂದು ಬಾಣೂರು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆದುಕೊಂಡಿದ್ದ ತಲೆ ಬುರಡೆ ಮತ್ತು ದವಡೆ ಇದನ್ನು ಶಿವಮೊಗ್ಗದ ಸಿಮ್ಸ್ ಆಸ್ಪತ್ರೆಗೆ ತಜ್ಞರ ಪರಿಶೀಲನೆಗೆ ಕಳಹಿಸಿಕೊಡಲಾಯಿತು.

47. ದಿಃ 28.11.2013 ರಂದು ಪ್ರಕರಣದಲ್ಲಿ ಡಿ.ಎನ್.ಎ ಪರಿಶೀಲನೆಗಾಗಿ ರಕ್ತ ಸಂಗ್ರಹಿಸುವ ಕಿಟ್ ನ್ನು ಬೆಂಗಳೂರಿನ ಎಫ್. ಎಸ್. ಎಲ್. ಕಚೇರಿಯಿಂದ ತರಿಸಿಕೊಳ್ಳಲಾಯಿತು. ದಿಃ 30.11.2013 ರಂದು ವೈದ್ಯರು ಸಂಗ್ರಹಿಸಿ ಕೊಟ್ಟಂತಹ Brain, Stomach, liver, spleen and Heart and Saturated common salt ಇವುಗಳನ್ನು ದಾವಣಗೆರೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಅದರ ಸ್ವೀಕೃತಿ ಪತ್ರವನ್ನು ಪಡೆದುಕೊಂಡಿರುತ್ತೇನೆ.

48. ದಿಃ 07.12.2013 ರಂದು ಮೃತ ಹರೀಶನ ತಂದೆಯು ನ್ಯಾಯಾಲಯದಿಂದ ಬೈಕ್ ಕೆ.ಎ.18/ಆರ್.59 ನ್ನು ಬಿಡುಗಡೆ

ಮಾಡಿದ ಆದೇಶ ಹಾಜರು ಪಡಿಸಿದ್ದರಿಂದ ಸದರಿ ಬೈಕ್ ಕೆ.ಎ.18/ಆರ್.59 ನ್ನು ಮೃತ ಹರೀಶನ ತಂದೆಗೆ ಹಸ್ತಾಂತರಿಸಲಾಯಿತು. ನಂತರ ಪ್ರಕರಣಕ್ಕೆ ಸಬಂಧಿಸಿದಂತೆ ಮೃತ ಹರೀಶನು ಬಿದ್ದ ಜಾಗದ 4 ಕಡೆಯಿಂದ ತೆಗೆದ ಮಣ್ಣಿನ ಮಾದರಿಯನ್ನು ಮಂಗಳೂರು ವಿದಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಹಿಸಿ ಅದರ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಮತ್ತು ಅದೇ ದಿನ ಸಿ.ಪಿ. ಸೋಮಶೇಖರ್ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

49. ದಿಃ 09.12.2013 ರಂದು ಎಸ್.ಬಿ. ಕಚೇರಿಯ ಇ.ಮೇಲ್ ಮುಖಾಂತರ ಮೃತ ಮತ್ತು ಆರೋಪಿಗಳ ಮೊಬೈಲ್ ಫೋನ್‌ಗಳ ಸಿ.ಡಿ.ಆರ್. ಮತ್ತು ಸಿ.ಎ.ಎಫ್ ಗಳ ಮಾಹಿತಿ ಬಂದಿದ್ದು ಅದನ್ನು ಡೌನ್ ಲೋಡಿ ಮಾಡಿ ಪ್ರಿಂಟ್ ತೆಗೆದುಕೊಳ್ಳಲಾಯಿತು ಮತ್ತು ಅದನ್ನು ಪರಿಶೀಲಿಸಲಾಯಿತು. ಮೇಲ್ಕಂಡ ಸಿ.ಡಿ.ಆರ್. ಮತ್ತು ಸಿ.ಎ.ಎಫ್ ಗಳ ಪರಿಶೀಲನೆಯಿಂದ ಕಂಡು ಬಂದಿದ್ದೇನೆಂದರೆ ದಿಃ 15.09.2013 ರಂದು ಕಾಣೆಯಾದ ಹರೀಶ್ ನ ಮೊಬೈಲ್ ಸೆಟ್ ನ್ನು ಐ.ಎಂ.ಇ.ಐ ನಂಬರ್ 35369805300748 ನ್ನು 5 ನೇ ಆರೋಪಿ ಜಬೀಉಲ್ಲಾ ದಿಃ 16.09.2013 ರಂದು ಮದ್ಯಾಹ್ಣ 3 ಗಂಟೆ 36 ನಿಮಿಷದಿಂದ ದಿಃ 17.09.2013 ರ ಬೆಳಗ್ಗಿನ 10.45 ಗಂಟೆ ವರೆಗೆ ಬೆಂಗಳೂರು ನಗರದ ಟವರ್ ಲೋಕೇಷನ್ ನಲ್ಲಿ

ತನ್ನ ಸಿಮ್ ನಂಬರ್ 9060906029 ನ್ನು ಉಪಯೋಗಿಸಿರುವುದು ಕಂಡು ಬರುತ್ತದೆ. ಹಾಗೂ ಆರೋಪಿಗಳೆಲ್ಲರು ದಿಃ 14.09.2013 ರಂದು ರಾತ್ರಿ 8 ರಿಂದ 9.30 ರವರೆಗೆ ಸಖರಾಯಪಟ್ಟಣದ ಸುತ್ತ ಮುತ್ತ ಇರುವ ಟವರ್ ಲೊಕೇಷನ್ ವ್ಯಾಪ್ತಿಯಲ್ಲಿ ಇದ್ದದ್ದು ಕಂಡು ಬರುತ್ತದೆ. ದಿಃ15.09.2013 ರಂದು ಸಂಜೆ 7 ರಿಂದ 9 ಗಂಟೆ ವರೆಗೆ ಆರೋಪಿಗಳೆಲ್ಲರು ಉದ್ದೇಬೋರನಹಳ್ಳಿ ಮತ್ತು ಸಖರಾಯಪಟ್ಟಣದ ಸುತ್ತ ಮುತ್ತ ಇರುವ ಟವರ್ ಲೊಕೇಷನ್ ವ್ಯಾಪ್ತಿಯಲ್ಲಿ ಇದ್ದದ್ದು ಕಂಡು ಬರುತ್ತದೆ.

50. ನನ್ನ ತನಿಖೆಯಲ್ಲಿ ದಿಃ 15.09.2013 ರಂದು ಮೃತ ಹರೀಶನನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಆತನ ಮೊಬೈಲ್ ಕೆಳಗೆ ಬಿದಿದ್ದು ಅದನ್ನು 5 ನೇ ಆರೋಪಿ ಜಬೀಉಲ್ಲಾ ತೆಗೆದುಕೊಂಡಿದ್ದು ಮತ್ತು ಅದಕ್ಕೆ ತನ್ನ ಸಿಮ್ ಹಾಕಿ ಅದನ್ನು ಉಪಯೋಗಿಸಿದ್ದು ಕಂಡು ಬಂದಿರುತ್ತದೆ.

51. ನಂತರ ಬೆಂಗಳೂರಿನ ವೆಸ್ಟ್ ಆರ್.ಟಿ.ಓ ಕಚೇರಿಯಿಂದ ಇಂಡಿಕಾ ಕಾರ್ ನಂಬರ್ ಕೆ.ಎ.02/ಎ.ಡಿ.697 ಇದರ ಬಿ.ಎಕ್ಸ್ ಟ್ರಾಕ್ಟ್ ಬಂದಿದ್ದು ಅದನ್ನು ಸ್ವೀಕರಿಸಿ ಪರಿಶೀಲಿಸಿರುತ್ತೇನೆ. ಈ ಸದರಿ ವಾಹನವನ್ನು ಆರೋಪಿತರಾದ 5, 6 ಮತ್ತು 7 ಇವರುಗಳು ಕೃತ್ಯ ನಡೆಸುವ ಸಲುವಾಗಿ ಬೆಂಗಳೂರಿನಿಂದ ಸಖರಾಯಪಟ್ಟಣಕ್ಕೆ ಬಂದು ಮತ್ತು ಕೃತ್ಯ ನಡೆಸಿದ ನಂತರ 4 ನೇ ಆರೋಪಿ ಗೌಸ್ ನೊಂದಿಗೆ ಮರಳಿ ಬೆಂಗಳೂರಿಗೆ ಹೋಗಲು

ಬಳಸಿರುತ್ತಾರೆ. ಆ ಸಂದರ್ಭದಲ್ಲಿ 7 ನೇ ಆರೋಪಿ ತೇಜಸ್ ವಾಹನವನ್ನು ಚಾಲನೆ ಮಾಡಿರುತ್ತಾನೆ.

52. ದಿಃ 19.12.2013 ರಂದು ಶಿವಮೊಗ್ಗ ಸಿಮ್ಸ್ ಸಂಸ್ಥೆಯಿಂದ ವರದಿ ಬಂದಿದ್ದು ಅದನ್ನು ಸ್ವೀಕರಿಸಿರುತ್ತೇನೆ. ನಂತರ ಮನವಿಯೊಂದಿಗೆ ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಾನು ಈಗ ಮನವಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.72 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.72(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ

ದಿನಾಂಕಃ 01-12-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದು ವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -</u>

53. ದಿಃ 19.12.2013 ರಂದು ಶಿವಮೊಗ್ಗ ಸಿಮ್ಸ್ ಆಸ್ಪತ್ರೆಯಿಂದ ಸ್ವೀಕರಿಸಿದ ವರದಿಯಲ್ಲಿ ಮೃತನ ಸ್ಕಲ್ ಮತ್ತು ಮ್ಯಾಂಡಿಬಲ್ ಇವುಗಳನ್ನು ಸರಿಯಾಗಿ ಸಂರಕ್ಷಣೆ ಮಾಡದೆ ಇರುವುದರಿಂದ ಅಭಿಪ್ರಾಯ ನೀಡಲು ಆಗುವುದಿಲ್ಲ ಎಂದು ಮತ್ತು ಈ ಕುರಿತು ವಿದಿ ವಿಜ್ಞಾನ ತಜ್ಞರಿಂದ ಅಭಿಪ್ರಾಯ ಪಡೆಯಲು ತಿಳಿಸಿದರು. ಈಗಾಗಲೇ ಗುರುತು ಮಾಡಿದ ನಿ.ಪಿ.72 ಮತ್ತು ನಿ.ಪಿ.72(ಎ) ಸದರಿ ಶಿವಮೊಗ್ಗ ಸಂಸ್ಥೆ ನೀಡಿದ ವರದಿಗೆ ಸಂಬಂಧಪಟ್ಟಿದ್ದಲ್ಲ. ದಿಃ 22.12.2013 ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಇಂಡಿಕಾ ಕಾರ ನ್ನು ಅಧರ ಮಾಲೀಕರು ನ್ಯಾಯಾಲಯದ ಆದೇಶದ ಮೇರೆಗೆ ವಾಹನವನ್ನು ಬಿಡುಗಡೆ ಮಾಡಲು ಕೋರಿದ್ದು ಅದರಂತೆ ಅವರ ವಾಹನವನ್ನು ಅವರಿಗೆ ಹಸ್ತಾಂತರಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ವಾಹನದ ಮಾಲೀಕರಾದ ಫ್ರಾಸಾ.27 ರವರು ನನ್ನ ಮುಂದೆ ನಿ.ಪಿ.39 ರಂತೆ ಹೇಳಿಕೆ ನೀಡಿರುತ್ತಾರೆ.

54. ದಿಃ 28.12.2013 ರಂದು ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯವರಿಂದ ಕೃತ್ಯ ನಡೆದ ಸ್ಥಳದ

ನಕ್ಷೆ ಮತ್ತು ಮೃತನ ಶವ ಬಿದ್ದ ಸ್ಥಳದ ನಕ್ಷೆಯನ್ನು ಸ್ವೀಕರಿಸಲಾಯಿತು. ಸದರಿ ಇಲಾಖೆಯಿಂದ ಸ್ವೀಕರಿಸಿದ ನಕ್ಷೆಗಳಿಗೆ ಸಂಬಂಧಿಸಿದ ಕವರಿಂಗ್ ಲೆಟರ್ ನ್ನು ಈಗಾಗಲೇ ನಿ.ಪಿ.45 ಎಂದು ಗುರುತಿಸಲಾಗಿದೆ. ಮತ್ತು ಆ 2 ನಕ್ಷೆಗಳನ್ನು ನಿ.ಪಿ.46 ಮತ್ತು ನಿ.ಪಿ.47 ಎಂದು ಗುರುತಿಸಲಾಗಿದೆ. ದಿಃ 30.12.2013 ರಂದು ಶವ ಪರೀಕ್ಷೆ ಸಮಯದಲ್ಲಿ ಮೃತನ ದೇಹದಿಂದ Right Femur ನ್ನು ಸಂಗ್ರಹಿಸಿಕೊಂಡಿದ್ದು ಅದರ ಡಿ.ಎನ್.ಎ ಪರೀಕ್ಷೆಗಾಗಿ ಕಳುಹಿಸಿಕೊಡಲು ಅವರ ತಂದೆ ತಾಯಿಯವರ ರಕ್ತದ ಮಾದರಿ ಸಲುವಾಗಿ ಅವರನ್ನು ಬರಲು ಹೇಳಿದ್ದು ಅದರಂತೆ ಸದರಿಯವರನ್ನು ನಮ್ಮ ಠಾಣೆಯ ಸಿಬ್ಬಂಧಿಯಾದ ಚಂದ್ರಶೇಖರ್ ರವರೊಂದಿಗೆ ಅವರುಗಳನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಕಡೂರು ಸರ್ಕಾರಿ ಆಸ್ಪತ್ರೆ ವೈದ್ಯರು ಸಂಗ್ರಹಿಸಿದ ಮೃತ ತಂದೆ ತಾಯಿಯವರ ರಕ್ತದ ಮಾದರಿಯನ್ನು ಮೃತನ Right Femur ಜೊತೆ ಶಿವಕುಮಾರ್ ಪಿ.ಸಿ. ರವರ ಮೂಲಕ ಬೆಂಗಳೂರಿನ ವಿದಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

55. ದಿಃ 01.01.2014 ರಂದು ಸಾಕ್ಷಿದಾರರಾದ ಚಾಸಾ.48 ಶಿವಕುಮಾರ್, ಚಾಸಾ.52 ಸೂರಪ್ಪ, ಚಾಸಾ.53

ವಸಂತ್ ಕುಮಾರ್, ಚಾಸಾ.54 ಸತೀಶ್, ಚಾಸಾ.55 ಚಂದ್ರಶೇಖರ್, ಫ್ರಾಸಾ.28 ಉಷಾ ರವರನ್ನು ನಾನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 16.01.2014 ರಂದು ಪ್ರಕರಣದ ತನಿಖೆಯನ್ನು ಮುಗಿಸಿ ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ

56. ದಿಃ 22.01.2014 ರಂದು ಎಫ್. ಎಸ್. ಎಲ್. ವರದಿಯನ್ನು ಪಡೆದಿದ್ದು ದಿಃ 06.03.2014 ರಂದು ಪಡೆದಿದ್ದ ಸಿಮ್ಸ್ ಆಸ್ಪತ್ರೆಯ ವರದಿಯನ್ನು ಮತ್ತು ದಿಃ 22.03.2014 ರಂದು ಬಾಣೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ನೀಡಿದ ಸಾವಿನ ಕುರಿತು ಅಂತಿಮ ವರದಿಯನ್ನು ಇವುಗಳನ್ನು ದಿಃ 21.01.2015 ರಂದು ನ್ಯಾಯಾಲಯಕ್ಕೆ ಮನವಿ ಪತ್ರದೊಂದಿಗೆ ನಿವೇದಿಸಿಕೊಳ್ಳಲಾಯಿತು. ಸದರಿ ಮನವಿ ಪತ್ರವನ್ನು ಈಗಾಗಲೇ ನಿ.ಪಿ.72 ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.72(ಎ) ಎಂದು ಗುರುತಿಸಲಾಗಿದೆ.

57. ಈಗ ತೋರಿಸಿದ ಬಾಣೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ನೀಡಿದ ಮರಣೋತ್ತರ ಪರೀಕ್ಷೆಯ ವರದಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.73 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು

ನಿ.ಪಿ.73(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾವಣಗೆರೆ ವಿಧಿ ವಿಜ್ಞಾನ ಪ್ರಯೋಗಾಲಯದವರು ನೀಡಿದ ವರದಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.74 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.74(ಎ) ಎಂದು ಗುರುತಿಸಲಾಯಿತು. ನಂತರ ಶಿವಮೊಗ್ಗ ಸಿಮ್ಸ್ ಆಸ್ಪತ್ರೆಯವರು ನೀಡಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.75 ಎಂದು ಗುರುತಿಸಲಾಯಿತು. ಮತ್ತು ಅದರ ಜೊತೆ ಲಗತ್ತಿಸಿದ ಮಾದರಿಯ ಸೀಲು ಇರುವ ಪತ್ರವನ್ನು ನಿಪಿ.75(ಎ) ಎಂದು ಗುರುತಿಸಲಾಯಿತು. ಮತ್ತು ಅವುಗಳ ಮೇಲೆ ಇರುವ ಸಾಕ್ಷಿಯ 2 ಸಹಿಗಳನ್ನು ನಿ.ಪಿ.75(ಬಿ.) ಮತ್ತು ನಿ.ಪಿ.75(ಸಿ) ಎಂದು ಗುರುತಿಸಲಾಯಿತು.

58. ದಿಃ 20.05.2016 ರಂದು ಡಿ.ಎನ್.ಎ ವರದಿಯನ್ನು ಸ್ವೀಕರಿಸಿದ್ದು ಅದನ್ನು ಮನವಿ ಪತ್ರದೊಂದಿಗೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಡಿ.ಎನ್.ಎ ವರದಿಗಳನ್ನು ಈಗಾಗಲೇ ನಿ.ಪಿ.52 ರಿಂದ ನಿ.ಪಿ.58 ಎಂದು ಗುರುತಿಸಲಾಗಿದೆ. ಸದರಿ ವರದಿಗಳನ್ನು ಕವರಿಂಗ್ ಲೆಟರ್ ಮುಖಾಂತರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.76 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು

ನಿ.ಪಿ.76(ಎ) ಎಂದು ಗುರುತಿಸಲಾಯಿತು.

59. ನಂತರ ನಾನು ದಿಃ 13.07.2016 ರಂದು ಕಡೂರ್ ನಿಂದ ಹೊಳಲಕೆರೆ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿರುತ್ತೇನೆ.

ಪಾಟೀ ಸವಾಲು ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದ – 1 ನೇ ಆರೋಪಿತನ ಪರವಾಗಿ

60. ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.

ಪಾಟೀ ಸವಾಲು ಶ್ರೀ ಹೆಚ್. ಎಂ. ಎಸ್. ವಕೀಲರಿಂದ – 2 ರಿಂದ 7 ನೇ ಆರೋಪಿತರ ಪರವಾಗಿ

61. ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ

ದಿನಾಂಕಃ 05-03-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದ – 1 ನೇ ಆರೋಪಿತನ ಪರವಾಗಿ

62. ತರಿಕೆರೆ ಉಪ ವಿಭಾಗಕ್ಕೆ ಕಡೂರು ತಾಲ್ಲೂಕು ಸಹ ಸೇರುತ್ತದೆ ಎಂದರೆ ಸರಿ. ನಾನು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು ಎಲ್ಲಾ ದಾಖಲಾತಿಗಳನ್ನು ನೋಡಿರುತ್ತೇನೆ. ಶವವನ್ನು ಹೊರ ತೆಗೆದಾಗ ಶವದ ತಲೆಯು ಪೂರ್ವ ಭಾಗಕ್ಕೆ ಮತ್ತು ಕಾಲು ಪಶ್ಚಿಮ ಭಾಗಕ್ಕೂ ಕಂಡು ಬಂದಿದ್ದು ಅದು ನಿ.ಪಿ.2 ರಲ್ಲಿ ನಮೂದಾಗಿದೆ ಎಂದರೆ ಸರಿ. ಹಾಗೆಯೇ ನಿ.ಪಿ.3 ರಲ್ಲಿ ಶವದ ಪಶ್ಚಿಮಕ್ಕೆ ತಲೆ ಮತ್ತು ಪೂರ್ವಕ್ಕೆ ಕಾಲು ಎಂದು ನಮೂದಾಗಿದೆ ಎಂದರೆ ಸರಿ. ಹಾಗೆಯೇ ನಿ.ಪಿ.3 ರ ಕಾಲಂ ನಂಬರ್ 5 ರಲ್ಲಿ ಶವ ಸಂಪೂರ್ಣ ಕೊಳೆತು ಹೋಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಿ.ಪಿ.41 ರ ಪಿ.ಎಂ. ವರದಿಯಲ್ಲಿ Right Femur ರ ಬಗ್ಗೆ ಮಾತ್ರ ನಮೂದಾಗಿದೆ ಎಂದರೆ ಸರಿ. ನಿ.ಪಿ.3 ರ ಕಾಲಂ ನಂಬರ್ 15 ರಲ್ಲಿ ನಮೂದಿಸಿದ ತೊಡೆ ಮೂಳೆಗಳನ್ನು ಅಂತರಾಳವನ್ನು ಮತ್ತು 3 ಬಗೆಯ ಮಣ್ಣನ್ನು ಪರೀಕ್ಷೆಗಾಗಿ ಕಳುಹಿಸಿಕೊಡಲು ಮನವಿ ಮಾಡಲಾಗಿದೆ ಎಂದರೆ ಸರಿ. ಮೃತನ ಕಾಚವು ಗುಲಾಬಿ ಬಣ್ಣದ್ದು ಎಂದು ಮೃತನ ತಂದೆ ತಾಯಿ ಮತ್ತು ಸಹೋದರಿ

ಯವರ ಹೇಳಿಕೆಗಳಿಂದ ಕಂಡು ಬರುತ್ತದೆ ಎಂದರೆ ಸರಿ. ನಿ.ಪಿ.6 ರಲ್ಲಿ ಕಂಡು ಬರುವ ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ಸ್ವಯಂ ಪಿರ್ಯಾದಿಯನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

63. ನಿ.ಪಿ.6 ರಲ್ಲಿ ಆರೋಪಿಗಳು ದೊಣ್ಣೆ ಉಪಯೋಗಿಸಿದ್ದು ನಮೂದಾಗಿಲ್ಲ ಎಂದರೆ ಸರಿ. ನಿ.ಪಿ.8 ರಲ್ಲಿ ತಾಯತ ಮತ್ತು ಒಳ ಉಡುಪುಗಳ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.15 ರಲ್ಲಿ Spanner ಮತ್ತು ಪೈಪ್ ನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಆದರೆ ಅದರಿಂದಲೇ ಆರೋಪಿಗಳು ಹೊಡೆದಿದ್ದರ ಬಗ್ಗೆ ನಮೂದು ಇರುತ್ತದೆ. ನಿ.ಪಿ.29, 31, 32, 33, 35, 36 ರ ಪ್ರಕಾರ ಫ್ರಾಸಾ.18, ಫ್ರಾಸಾ.19, ಫ್ರಾಸಾ.20 ಮತ್ತು ಫ್ರಾಸಾ.22 ರವರು ನನ್ನ ಮುಂದೆ ಕ್ರಮವಾಗಿ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.42 ರಲ್ಲಿ Histopathology ವರದಿಯ ಪ್ರಕಾರ ಯಾವುದೇ ಅಭಿಪ್ರಾಯವನ್ನು ಕೊಡಲು ಬರುವುದಿಲ್ಲ ಎಂದು ಬರೆದಿದ್ದಾರೆ ಎಂದರೆ ಸರಿ. ನಿ.ಪಿ.44 ರಲ್ಲಿ ಮನುಷ್ಯನ ರಕ್ತವೋ ಅಲ್ಲವೋ ಎಂಬುದರ ಬಗ್ಗೆ Determine ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. ನಿ.ಪಿ.47 ನ್ನು ನಾನು ನಮ್ಮ ಅನುಕೂಲಕ್ಕೆ

ತಕ್ಕಂತೆ ಹೇಳಿ ಬರೆಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಫ್ರಾಸಾ.32 ಇವರು ನಿ.ಪಿ.49 ಮತ್ತು ನಿ.ಪಿ.49(ಎ) ಪ್ರಕಾರ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿ.ಪಿ.76 ರನ್ನು ನಾನು ದಿಃ13.07.216 ರಂದು ಸಹಿ ಮಾಡಿದ್ದು ಅದನ್ನು ದಿಃ 29.08.2016 ರಂದು ನ್ಯಾಯಾಲಯಕ್ಕೆ ನಿವೇದನೆ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ನಿ.ಪಿ.52 ರಲ್ಲಿ ಫ್ರಾಸಾ.37 ರವರು ದಿಃ 22.03.2016 ರಂದು ಮತ್ತು ನಿರ್ದೇಶಕರು ಎಫ್. ಎಸ್. ಎಲ್. ಬೆಂಗಳೂರು ಇವರು ದಿಃ 23.03.2016 ರಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.60, 62, 63, 64, 65 ಮತ್ತು 66 ರಲ್ಲಿ ಇರುವ ಹೇಳಿಕೆಗಳು ಕಾನೂನು ಪ್ರಕಾರ ಮಾಡಿಕೊಂಡಿದಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಿ.ಪಿ.72 ನ್ನು ದಿಃ 22.03.2016 ರಂದು ನಾನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

64. ನಿ.ಪಿ.73 ಮತ್ತು ನಿ.ಪಿ.41 ಇವುಗಳನ್ನು ಒಟ್ಟಿಗೆ ನೋಡಲಾಗಿ ನಿಖರವಾಗಿ ಸಾವಿಗೆ ಕಾರಣ ಹೇಳಲು ಆಗುವುದಿಲ್ಲ, ಆದರೆ ತಲೆಗೆ ಬಿದ್ದ ಏಟಿನಿಂದ ಸಾವು ಸಂಭವಿಸಿರಬಹುದು ಎಂದು ವೈದ್ಯರು ಅಭಿಪ್ರಾಯ ಪಟ್ಟಿರುತ್ತಾರೆ. ನಿ.ಪಿ.73 ರಲ್ಲಿ ಎಂ.ಒ. ಹೆಚ್. ಜಿಗನೇಹಳ್ಳಿ ಮತ್ತು ಪಿ.ಹೆಚ್.ಸಿ. ಬಾಣೂರು ಇವುಗಳ

ವೈದ್ಯರು ಮರಣೋತ್ತರ ಪರೀಕ್ಷೆ ಮಾಡಿದ್ದು ಅವರ ಸಹಿ ಇರುತ್ತದೆ. ನಿ.ಪಿ.75 ರಲ್ಲಿ ನಮೂದಿಸಿರುವ ವಿಷಯಗಳು ನನ್ನ ತನಿಖೆಯ ಸಮಯದಲ್ಲಿ ಕಂಡು ಬಂದವು ಎಂದರೆ ಸರಿ. 1 ನೇ ಆರೋಪಿಯನ್ನು ದಿಃ 26.10.2013 ರಂದು ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಪಿ.ಎಸ್.ಐ ಸಂತೋಷ್ ಶೆಟ್ಟಿ ಮತ್ತು ಸಿಬ್ಬಂಧಿಯವರು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ನಿ.ಪಿ.16 ರಲ್ಲಿ 1 ನೇ ಆರೋಪಿಯಿಂದ ಮೊಬೈಲ್ ಪೋನ್ ನ್ನು ವಶಪಡಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಫ್ರಾಸಾ.1 Assistant Commissioner ಬಂದಾಗ 12 ಅಥವಾ 12.15 ಗಂಟೆಯಾಗಿತ್ತು. ಕಡೂರಿನಿಂದ ಸಖರಾಯಪಟ್ಟಣ ಪೊಲೀಸ್ ಠಾಣೆ ಸುಮಾರು 18 ರಿಂದ 20 ಕಿ.ಮೀ ದೂರದಲ್ಲಿ ಇರುತ್ತದೆ.

65. ದಿಃ 26.10.2013 ರಂದು ಬೆಳಿಗ್ಗೆ 7.45 ಗಂಟೆಗೆ ಪಿ.ಎಸ್.ಐ ಗಿರೀಶ್ ರವರು 5 ನೇ ಆರೋಪಿ ಜಮೀಉಲ್ಲಾ ನನ್ನು ಹಾಜರು ಪಡಿಸಿದ್ದು ಆತನನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 5 ನೇ ಆರೋಪಿಯು ಇತರ ಆರೋಪಿಗಳೊಂದಿಗೆ ಸೇರಿ ಹರೀಶನನ್ನು ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾನೆ ಎಂಬ ಹೇಳಿಕೆಯನ್ನು ಮಾಡಿಕೊಳ್ಳಲು ನನಗೆ ಅವಕಾಶ ಇರಲಿಲ್ಲ

ಎಂದರೆ ಸರಿಯಲ್ಲ. ಮೃತನ ಮೊಬೈಲ್ ನ್ನು 5 ನೇ ಆರೋಪಿಯು ಸ್ವತಃ ತೆಗೆದುಕೊಂಡಿದ್ದು, ಅದರಲ್ಲಿ ಮೃತನ ಸಿಮ್ ನ್ನು ತೆಗೆದು ಬಿಸಾಕಿ ತನ್ನ ಸಿಮ್ ನ್ನು ಹಾಕಿ 2 ದಿನ ಉಪಯೋಗಿಸಿಕೊಂಡಿದ್ದು, ನಂತರ ಮೃತನ ಮೊಬೈಲ್ ಹ್ಯಾಂಡ್ ಸೆಟ್ ನ್ನು ಧ್ವಂಸ ಮಾಡಿದ್ದು, ಸದರಿ 5 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ " ಉಪಯೋಗಿಸಿದ ಸಿಮ್ ನ್ನು ಹಾಲಿ ನಾನು ಉಪಯೋಗಿಸುತ್ತಿರುವ ಸೆಟ್ ನಲ್ಲಿ ಇದ್ದು, ಅದನ್ನು ಹಾಜರುಪಡಿಸುತ್ತೇನೆ " ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಶಾನೆ ಪಿ-59 ರ ಪ್ರಕಾರ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

66. ನಂತರ ಪಂಚರಾದ ಸದಾಶಿವಯ್ಯ ಮತ್ತು ರವಿಕುಮಾರ್ ಇವರನ್ನು ಠಾಣೆಗೆ ಬರಲು ಹೇಳಿದೆವು. ಅದರಂತೆ ಅವರು ಬಂದ ನಂತರ ಅವರ ಸಮಕ್ಷಮ 5 ನೇ ಆರೋಪಿ ಹಾಜರುಪಡಿಸಿದ ಮೊಬೈಲ್ ಮತ್ತು ಸಿಮ್ ನ್ನು ಅಮಾನತ್ತುಪಡಿಸಿಕೊಳ್ಳಲಾಗಿಲ್ಲ ಎಂದರೆ ಸರಿಯಲ್ಲ. ಸದರಿ ಅಮಾನತ್ತು ಮಹಜರನ್ನು ಈಗಾಗಲೇ ನಿಶಾನೆ ಪಿ-15 ಎಂದು ಗುರುತಿಸಲಾಗಿಲ್ಲ ಎಂದರೆ ಸರಿಯಲ್ಲ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-15(ಸಿ) ಎಂದು ಗುರುತಿಸಲಾಗಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರ್ ನ ಪ್ರಕ್ರಿಯೆಯನ್ನು ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಜರುಗಿಸಲಾಗಿಲ್ಲ ಎಂದರೆ ಸರಿಯಲ್ಲ. ಈಗ ನಿಶಾನೆ ಪಿ-

15 ರಡಿ ಅಮಾನತ್ತುಪಡಿಸಿದ ಸದರಿ ಮೊಬೈಲ್ ಮತ್ತು ಸಿಮ್ ನ್ನು ಈಗ ತೋರಿಸಿದರೆ ಗುರುತಿಸಲಾಗಿಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮೊಬೈಲ್ ಸೆಟ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆಮಾಲು 4 ಎಂದು ಗುರುತಿಸಲಾಗಿಲ್ಲ ಎಂದರೆ ಸರಿಯಲ್ಲ ಮತ್ತು ಸದರಿ ಮುದ್ದೆಮಾಲು 4 ನೋಕಿಯಾ ಕಂಪನಿಯದ್ದಾಗಿರುತ್ತದೆ. ಮುದ್ದೆಮಾಲು 4 ರಲ್ಲಿ ಅಳವಡಿಸಿದ್ದ ಸಿಮ್ ನ್ನು ಈಗ ನೋಡುತ್ತಿದ್ದು ಅದರ ಯೂನಿಕ್ ಸಂಖ್ಯೆ- 8991450002020, 9983385 ಇಸಿಹೆಚ್ - 2 ಮತ್ತು ಆ ಸಿಮ್ ನ ಮೊಬೈಲ್ ನಂಬರ್ 9060906029 ಇರುತ್ತದೆ. ಅದನ್ನು ಈಗ ಮುದ್ದೆಮಾಲು 13 ಎಂದು ಗುರುತಿಸಲಾಗಿಲ್ಲ ಎಂದರೆ ಸರಿಯಲ್ಲ.

67. ಅದೇ ರೀತಿ 1 ನೇ ಆರೋಪಿಯಾದ ಅನಂತರಾಮೇಗೌಡ ಈತನನ್ನು ಬಂಧಿಸಲೆಂದು ಪಿ.ಎಸ್.ಐ ಸಂತೋಷ್ ಇವರನ್ನು ಕಳುಹಿಸಿದ್ದು ಅದರಂತೆ ಅವರು ಸದರಿ ಆರೋಪಿಯನ್ನು ಆತನ ಮನೆಯಿಂದ ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಅದೇ ರೀತಿ ನಿ.ಪಿ.60 ರಂತೆ ಆತನ ಸ್ವಇಚ್ಛಾ ಹೇಳಿಕೆಯಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಪಂಚರ ಸಮಕ್ಷಮ 1 ನೇ ಆರೋಪಿ ಹಾಜರುಪಡಿಸಿದ ಸಿಲ್ವರ್ ಬಣ್ಣದ ಸ್ಯಾಮ್ ಸ್ಯಂಗ್ ಮೊಬೈಲ್ ಸೆಟ್ ನ್ನು ಮತ್ತು ಅದರಲ್ಲಿದ್ದ ಐಡಿಯಾ

ಕಂಪನಿಯ ಸಿಮ್ ಮೊಬೈಲ್ ಸಂಖ್ಯೆ:- 9242888865 ಮತ್ತು ಅದರ ಯೂನಿಕ್ ನಂಬರ್:- 8991440001516623509 ಎಂದು ಇದ್ದು ಅದನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ನಿಶಾನೆ ಪಿ-16 ರಂತೆ ಮಹಜರ್ ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

68. 1 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಂತೆ ತಾನು ಮೃತನ ಊತಿಟ್ಟ ಶವವನ್ನು ತೋರಿಸುವುದಾಗಿ ಹೇಳಿದ್ದರಿಂದ ಶವ ಮಹಜರ್ ಕ್ರಮ ಜರುಗಿಸಲು ದೂರವಾಣಿ ಮೂಲಕ ಚಿಕ್ಕಮಗಳೂರಿನ ಉಪ ವಿಭಾಗಾಧಿಕಾರಿಗಳಿಗೆ ತಿಳಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ನಾನು ಉಪವಿಭಾಗಾಧಿಕಾರಿಗಳಿಗೆ ಶವ ಮಹಜರ್ ಕ್ರಮ ಜರುಗಿಸಲು ಮುಂಚಿತವಾಗಿ ನೋಟೀಸ್ ನ್ನು ಕೊಟ್ಟಿರುವುದಿಲ್ಲ. ಆದರೆ ಅವರು ಠಾಣೆಗೆ ಬಂದ ನಂತರ ಅವರಿಗೆ ಈ ಕುರಿತು ನೋಟೀಸ್ ನ್ನು ನೀಡಿರುತ್ತೇನೆ. ನಿ.ಪಿ.1 ರಂತೆ ಉಪವಿಭಾಗಾಧಿಕಾರಿಗಳಿಗೆ ನಾನು ಯಾವುದೇ ಮನವಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಖರಾಯಪಟ್ಟಣ ದಿಂದ ಬಿಳೇಕಲ್ಲಳ್ಳಿ ಸುಮಾರು 6 ರಿಂದ 7 ಕಿ.ಮೀ ದೂರ ಇರುತ್ತದೆ. ಶವ ಮಹಜರ್ ದಿನ ಮೃತನ ತಂದೆ ತಾಯಿ ಇವರು ಸುಮಾರು 11.30 ಗಂಟೆಗೆ ಬಂದಿರುತ್ತಾರೆ. ಉಪವಿಭಾಗಾಧಿಕಾರಿಗಳು ನನಗೆ ದೂರವಾಣಿಯಲ್ಲಿ ತಾನು ನೇರವಾಗಿ ಠಾಣೆಗೆ ಬರುವುದಾಗಿ

ಅಷ್ಟರೊಳಗಡೆ ಶವ ಮಹಜರ್ ಮಾಡಲು ಮೃತನ ಸಂಬಂಧಿಕರು, ಪಂಚರು ಮತ್ತು ಇನ್ನಿತರ ವ್ಯವಸ್ಥೆ ಮಾಡಲು ತಿಳಿಸಿರುತ್ತಾರೆ ಇದನ್ನು ನಾನು ನಮ್ಮ ಠಾಣಾ ದಿನಚರಿಯಲ್ಲಿ ನಮೂದಿಸಿಲ್ಲ. ಅದೇ ರೀತಿ ಪೌರ ಕಾರ್ಮಿಕರು ಠಾಣೆಗೆ ಬಂದಾಗ ಸುಮಾರು 11.45 ಗಂಟೆಯಾಗಿತ್ತು. ಮೃತನ ಶವ ಸಿಕ್ಕ ಜಾಗವಾದ ಅಣಚಿಹಳ್ಳಿಗೂ ಮತ್ತು ಸಖರಾಯಪಟ್ಟಣಕ್ಕೂ ಸುಮಾರು 7 ಕಿ.ಮೀ ದೂರವಾಗುತ್ತದೆ. ಆ ದಿನ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಉಪವಿಭಾಗಾಧಿಕಾರಿಗಳು ಬಂದಿದ್ದು, ಪೌರ ಕಾರ್ಮಿಕರು ಬಂದಿದ್ದು ಮತ್ತು ಮೃತ ತಂದೆ ತಾಯಿ ಸಂಬಂಧಿಕರು ಇದ್ದು ಮೃತನ ಶವವನ್ನು ಮಹಜರ್ ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವವನ್ನು ಹೊರ ತೆಗೆದ ನಂತರ ಮೃತನ ತಂದೆ ತಾಯಿ ಮತ್ತು ಸಹೋದರಿ ಶವವನ್ನು ಗುರುತಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ಸಂದರ್ಭದಲ್ಲಿ ಒಂದು ಗುದ್ದಲಿಯನ್ನು ಹಾಜರು ಪಡಿಸಿದ್ದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

69. 1 ನೇ ಆರೋಪಿ ಮತ್ತು 5 ನೇ ಆರೋಪಿಗಳು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಅದರಂತೆ ನಾವು ನಿ.ಪಿ.17 ರಂತೆ ಮಹಜರ್ ಕ್ರಮ ಜರುಗಿಸಿರುತ್ತೇವೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.61 ರಡಿ

ಕಚ್ಚಾ ನಕ್ಷೆಯನ್ನು ತಯಾರಿಸಲಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಕೃತ್ಯಕ್ಕೆ ಉಪಯೋಗಿಸಲಾದ ಒಮಿನಿ ಕಾರನ್ನು ಗ್ಯಾರೇಜ್ ನಿಂದ ವಶಪಡಿಸಿಕೊಂಡಿಲ್ಲ ಮತ್ತು ನಿ.ಪಿ.34 ರ ಪ್ರಕಾರ ಅದನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

70. ಮೃತನ ಶವವನ್ನು ಅವನ ವಾರಸುದಾರರಾದ ತಂದೆಗೆ ಹಸ್ತಾಂತರಿಸಿದ ನಂತರ ಶವದ ಮೈಮೇಲಿದ್ದ ಮಾಸಲು ಗುಲಾಬಿ ಬಣ್ಣದ ಚಡ್ಡಿ ಮತ್ತು ಒಂದು ಕಪ್ಪು-ಬಿಳಿ ಮತ್ತು ಕೆಂಪು ಬಣ್ಣದ ದಾರಗಳಲ್ಲಿ ಕಟ್ಟಿದ ಒಂದು ತಾಮ್ರದ ಗುಂಡಿನಂತಿರುವ ತಾಯಿತವನ್ನು ವಶಪಡಿಸಿಕೊಂಡಿಲ್ಲ ಮತ್ತು ಅವುಗಳನ್ನು ಪಂಚರಾದ ಶಿವಕುಮಾರ್ ಮತ್ತು ಚಂದ್ರಶೇಖರ್ ರವರ ಸಮಕ್ಷಮ ರಾತ್ರಿ 9.30 ರಿಂದ 10.30 ರವರೆಗೆ ಠಾಣೆಯಲ್ಲಿಯೇ ನಿ.ಪಿ.18 ರಂತೆ ಮಹಜರ್ ಜರುಗಿಸಿಲ್ಲ ಎಂದರೆ ಸರಿಯಲ್ಲ.

71. ದಿನಾಂಕಃ- 27-10-2013 ರಂದು ಬೆಳಗಿನ ಜಾವ 4 ಗಂಟೆಗೆ ನಾನು ಸಖರಾಯಪಟ್ಟಣ ಠಾಣೆಯಲ್ಲಿರುವಾಗ ಪಿ.ಎಸ್.ಐ ಸಂತೋಷ್ ಶೆಟ್ಟಿ ಮತ್ತು ಸಿಬ್ಬಂದಿಗಳು 2 ನೇ ಆರೋಪಿಯಾದ ಕೃಷ್ಣಮೂರ್ತಿ, 3 ನೇ ಆರೋಪಿಯಾದ ನಳಿನ್ ಕುಮಾರ್ ಮತ್ತು 4 ನೇ ಆರೋಪಿಯಾದ ಗೌಸ್ ಇವರನ್ನು ವಶಕ್ಕೆ ಪಡೆದುಕೊಂಡು ಬಂದು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಹಾಗೆಯೇ 2, 3 ಮತ್ತು 4 ನೇ ಆರೋಪಿಗಳು ಕ್ರಮವಾಗಿ ನಿ.ಪಿ.62, 63 ಮತ್ತು 64 ರಂತೆ ಯಾವುದೇ ಸ್ವ ಇಚ್ಛಾ ಹೇಳಿಕೆಗಳನ್ನು ನನ್ನ ಮುಂದೆ ಕೊಟ್ಟಿವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಹಾಗೆಯೇ ನಿ.ಪಿ.19 ರಂತೆ ಮಹಜರ್ ಮಾಡಿ ಮೊಬೈಲ್ ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

72. ಅದೇ ರೀತಿ ನಿ.ಪಿ.18 ಮಹಜರ್ ನ ಅಡಿಯಲ್ಲಿ ವಶಪಡಿಸಿಕೊಂಡ 2 ನೇ ಆರೋಪಿ ಕೃಷ್ಣಮೂರ್ತಿಯ ಮೊಬೈಲ್ ನಂಬರ್:- 9535595896 ಆಗಿದ್ದು, ನಂತರ 3 ನೇ ಆರೋಪಿ ನಳಿನ್ ಕುಮಾರ್ ಇವರು ಹಾಜರುಪಡಿಸಿದ ಮೊಬೈಲ್ ನಲ್ಲಿ 2 ಸಿಮ್ ಗಳಿದ್ದು, ಒಂದು ಏರ್ ಟೆಲ್ ಸಿಮ್ ಅದರ ಸಂಖ್ಯೆ:- 9611201233 ಮತ್ತು ಇನ್ನೊಂದು ಬಿ.ಎಸ್.ಎನ್.ಎಲ್ ಸಿಮ್ ಆಗಿದ್ದು ಅದರ ಸಂಖ್ಯೆ:- 9482319093 ಆಗಿರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿಗಳಿಂದ ಮು.ಮಾ.14 ರಿಂದ 18 ರವರೆಗೆ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿಗಳಾದ ತಬ್ರೀಸ್ ಮತ್ತು ತೇಜಸ್ ಇವರುಗಳನ್ನು ನನ್ನ ಮುಂದೆ ಹಾಜರು ಪಡಿಸಿದ್ದು, ಅವರನ್ನು ದಸ್ತಗಿರಿ ಮಾಡಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ನಿ.ಪಿ.65 ಮತ್ತು 66 ರಂತೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

73. ಅದೇ ರೀತಿ ನಿ.ಪಿ.20 ರಡಿಯಲ್ಲಿ ಆರೋಪಿಗಳಿಂದ ಕೃತ್ಯಕ್ಕೆ

ಬಳಸಿದ್ದ ಕಾರು ಮತ್ತು ಟಚ್ ಸ್ಕ್ರೀನ್ ನೋಕಿಯಾ ಮೊಬೈಲ್ ಹಾಂಡ್ ಸೆಟ್ ನ್ನು ಮು.ಮಾ.19 ಮತ್ತು 20 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯ ಪ್ರಕಾರ ಮೋಟರ್ ಸೈಕಲ್ ನ್ನು ಹಾಜರು ಪಡಿಸಿಲ್ಲ ಮತ್ತು ಅದನ್ನು ನಿ.ಪಿ.24 ರ ಪ್ರಕಾರ ಪಂಚನಾಮೆ ಮಾಡಲಾಗಿಲ್ಲ ಮತ್ತು ನಿ.ಪಿ.26 ರ ಪ್ರಕಾರ ಪೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 4, 6 ಮತ್ತು 7 ನೇ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ವಸ್ತುಗಳನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಸ್ಥಳಕ್ಕೆ ಹೋಗಿ ನಿ.ಪಿ.25 ರಂತೆ ಪಂಚನಾಮೆ ಮಾಡಿ ಅವುಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಅಲ್ಲಿ ಪೋಟೋಗಳನ್ನು ತೆಗೆಯಲಾಯಿತು ಮತ್ತು ಮು.ಮಾ.6 ಮತ್ತು 8 ಇವುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.27 ರ ಪ್ರಕಾರ ಪಂಚನಾಮೆ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. 3 ನೇ ಆರೋಪಿ ನಳೀನ್ ಕುಮಾರ್ ಕೊಟ್ಟ ಹೇಳಿಕೆ ಮೇರೆಗೆ ಸ್ಥಳಕ್ಕೆ ಹೋಗಿ ನಿ.ಪಿ.21 ರಂತೆ ಪಂಚನಾಮೆಯನ್ನು ಮಾಡಲಾಯಿತು, ಹಾಗೂ ನಿ.ಪಿ.23 ರಂತೆ Wheel Spanner ನ್ನು ಪೋಟೋ ತೆಗೆಯಲಾಯಿತು ಮತ್ತು 3 ನೇ ಆರೋಪಿಯು ಕೊಲೆ ಮಾಡಿದ ಜಾಗವನ್ನು ತೋರಿಸಿದ್ದು

ಅದನ್ನು ನಿ.ಪಿ.68 ರಂತೆ ಪೋಟೋ ತೆಗೆಯಲಾಯಿತು ಎಂದು ಮತ್ತು Wheel Spanner ನ್ನು ಮು.ಮಾ.7 ಎಂದು ಗುರುತಿಸಿದ್ದು ಸುಳ್ಳು ಎಂದರೆ ಸರಿಯಲ್ಲ.

74. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಗಳ ಹೇಳಿಕೆಯನ್ನು ಮಾಡಿಕೊಂಡಿದ್ದು ಅದು ಸುಳ್ಳು ಎಂದರೆ ಸರಿಯಲ್ಲ.

75. ಅದೇ ರೀತಿ 1 ನೇ ಆರೋಪಿಯು ಮೃತ ಹರೀಶನನ್ನು ಕೊಲೆ ಮಾಡಿದ್ದ ಸ್ಥಳದಿಂದ ಹೂತಿಟ್ಟ ಸ್ಥಳಕ್ಕೆ ಆತನ ಮೃತ ದೇಹವನ್ನು ಸಾಗಿಸಲು ಅಮಾನತ್ತು ಪಡಿಸಲಾದ ವಾಹನದಲ್ಲಿ ತೆಗೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

76. ನಿ.ಪಿ.28 ನ್ನು ನಿ.ಪಿ.37 ರ ಕೆಳಗೆ ವಶಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ನಿ.ಪಿ.28 ನ್ನು ಈ ಪ್ರಕರಣಕ್ಕಾಗಿ ಹುತಾರು ಮಾಡಿಕೊಳ್ಳಲಾಯಿತು ಎಂದರೆ ಸರಿಯಲ್ಲ. ನಿ.ಪಿ.28 ರಲ್ಲಿ ಕೊಂಡ ಮೊಬೈಲ್ ನಲ್ಲಿ ಆರೋಪಿ ಜಬೀಉಲ್ಲಾ ಈತನು ತನ್ನ ಸಿಮ್ ನ್ನು ಹಾಕಿಕೊಂಡು ಉಪಯೋಗಿಸಿದ್ದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

77. ದಿಃ 12.11.2013 ರಂದು ಬಾಣೂರು ಪಿ.ಹೆಚ್.ಸಿ.

ಕೇಂದ್ರದಿಂದ ಠಾಣಾ ಹೆಚ್.ಸಿ. ರಮೇಶಪ್ಪ ಮೃತ ಹರೀಶನ ವೈದ್ಯಕೀಯ ಸಂದರ್ಭದಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ನಿ.ಪಿ.38 ರ ಪ್ರಕಾರ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೃತ ಹರೀಶನು ಹೂತಿಟ್ಟ ಜಾಗದ ಮಣ್ಣನ್ನು ಮು.ಮಾ.22 ರಿಂದ 25 ಎಂದು ತಂದು ಹಾಜರು ಪಡಿಸಿದ್ದನ್ನು ನಿ.ಪಿ.41 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಕೆ.ಎ.18/ಆರ್.59 ಮತ್ತು ಕೆ.ಎ.038/ಎಂ.ಇ.9920 ಇವುಗಳ B-Extract ನ್ನು ತಂದು ಹಾಜರು ಪಡಿಸಿದ್ದ ಮೇರೆಗೆ ಕ್ರಮವಾಗಿ ನಿ.ಪಿ.69 ಮತ್ತು 70 ಪ್ರಕಾರ ಅಮಾತನ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.71 ರಂತೆ B-Extract ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಿಂದ Brain, Stomach, Liver, Spleen, Heart and Saturated Common Salt ಇವುಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಹೇಳಿರುವ ಕುರಿತು ಮನವಿ ಇರುವುದಿಲ್ಲ ಎಂದರೆ ಸರಿ. ಆದರೆ ಯಾವುದೇ ಅವಶ್ಯಕತೆ ಇರುತ್ತದೆಯೋ ಅದನ್ನು ಸಂಬಂಧಪಟ್ಟವರು ತೆಗೆದುಕೊಂಡಿರುತ್ತಾರೆ. ಹಾಗೆಯೇ ಅಗತ್ಯವಿರುವ ಇನ್ನಿತರ ಅಂಶಗಳನ್ನು ಸಂಗ್ರಹಿಸಿಕೊಡಲು ಉಪವಿಭಾಗಾಧಿಕಾರಿಗಳು

ಸಂಬಂಧಪಟ್ಟ ವೈದ್ಯರಿಗೆ ಮನವಿಯನ್ನು ನೀಡಿರುತ್ತಾರೆ.

78. ದಿಃ 09.12.2013 ರಂದು ಎಸ್.ಬಿ. ಕಚೇರಿಯ ಇ.ಮೇಲ್ ಮುಖಾಂತರ ಮೃತ ಮತ್ತು ಆರೋಪಿಗಳ ಮೊಬೈಲ್ ಫೋನ್‌ಗಳ ಸಿ.ಡಿ.ಆರ್. ಮತ್ತು ಸಿ.ಎ.ಎಫ್ ಗಳ ಮಾಹಿತಿ ಬಂದಿದ್ದು ಅದನ್ನು ಡೌನ್ ಲೋಡಿ ಮಾಡಿ ಪ್ರಿಂಟ್ ತೆಗೆದುಕೊಂಡಿದ್ದು ನಿಜ್ಜವಲ್ಲ ಸುಳ್ಳು ಎಂದರೆ ಸರಿಯಲ್ಲ. ಸದರಿ ಮೊಬೈಲ್ ನ ಟವರ್ ಲೋಕೇಷನ್‌ಗಳು ಬೆಂಗಳೂರು ನಗರ, ಸಖರಾಯಪಟ್ಟಣ, ಉದ್ದೇಬೋರನಹಳ್ಳಿಯ ಟವರ್ ಲೋಕೇಷನ್ ಗಳಲ್ಲಿ ಉಪಯೋಗಿಸಿರುವುದು ಕಂಡು ಬರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

79. ಅದೇ ರೀತಿ ದಿಃ 15.09.2013 ರಂದು ಮೃತ ಹರೀಶನನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಆತನ ಮೊಬೈಲ್ ಕೆಳಗೆ ಬಿದಿದ್ದು ಅದನ್ನು 5 ನೇ ಆರೋಪಿ ಜಬೀಉಲ್ಲಾ ತೆಗೆದುಕೊಂಡಿದ್ದು ಮತ್ತು ಅದಕ್ಕೆ ತನ್ನ ಸಿಮ್ ಹಾಕಿ ಅದನ್ನು ಉಪಯೋಗಿಸಿದ್ದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

80. ಅದೇ ರೀತಿ ಬೆಂಗಳೂರಿನ ವೆಸ್ಟ್ ಆರ್.ಟಿ.ಒ ಕಚೇರಿಯಿಂದ ಇಂಡಿಕಾ ಕಾರ್ ನಂಬರ್ ಕೆ.ಎ.02/ಎ.ಡಿ.697 ಇದರ ಬಿ.ಎಕ್ಸ್

ಟ್ರಾಕ್ಟ್ ಬಂದಿದ್ದು ಅದನ್ನು ಸ್ವೀಕರಿಸಿ ಪರಿಶೀಲನೆ ಮಾಡಿದ್ದು ಮತ್ತು ಆ ಸದರಿ ವಾಹನವನ್ನು ಆರೋಪಿತರಾದ 5, 6 ಮತ್ತು 7 ಇವರುಗಳು ಕೃತ್ಯ ನಡೆಸುವ ಸಲುವಾಗಿ ಬೆಂಗಳೂರಿನಿಂದ ಸಖರಾಯಪಟ್ಟಣಕ್ಕೆ ಬಂದು ಮತ್ತು ಕೃತ್ಯ ನಡೆಸಿದ ನಂತರ 4 ನೇ ಆರೋಪಿ ಗೌಸ್ ನೊಂದಿಗೆ ಮರಳಿ ಬೆಂಗಳೂರಿಗೆ ಹೋಗಲು ಬಳಸಿದ್ದಾರೆಂದು ಮತ್ತು ಆ ಸಂದರ್ಭದಲ್ಲಿ 7 ನೇ ಆರೋಪಿ ತೇಜಸ್ ವಾಹನವನ್ನು ಚಾಲನೆ ಮಾಡಿರುತ್ತಾನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

81. ಅದೇ ರೀತಿ ದಿಃ 19.12.2013 ರಂದು ಶಿವಮೊಗ್ಗ ಸಿಮ್ಸ್ ಸಂಸ್ಥೆಯಿಂದ ವರದಿ ಬಂದಿದ್ದು ಅದನ್ನು ನಾನು ಸ್ವೀಕರಿಸಿ ನಂತರ ಅದನ್ನು ಮನವಿಯೊಂದಿಗೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಅದನ್ನು ನಿ.ಪಿ.72 ಎಂದು ಗುರುತಿಸಲಾಗಿದ್ದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.39 ರಂತೆ ಪ್ರಾಸಾ.27 ರವರು ಯಾವುದೇ ಹೇಳಿಕೆಯನ್ನು ನನ್ನ ಮುಂದೆ ಕೊಟ್ಟಿಲ್ಲ ಎಂದು ಸೂಚಿಸುವುದು ಸರಿಯಲ್ಲ.

82. ಅದೇ ರೀತಿ ದಿಃ 30.12.2013 ರಂದು ನಾನು ಶವ ಪರೀಕ್ಷಯ ಸಂದರ್ಭದಲ್ಲಿ ಮೃತನ Right Femur ನ್ನು ಸಂಗ್ರಹಿಸಿಕೊಂಡಿದ್ದು ಅದೇ ದಿನ ಮೃತ ತಂದೆ ತಾಯಿಗಳ

ರಕ್ತವನ್ನು ಸಂಗ್ರಹಿಸಿಕೊಂಡು ಅದನ್ನು ಅದೇ ದಿನ ದಿಃ 30.12.2013 ರಂದು ಎಫ್. ಎಸ್. ಎಲ್.ಗೆ ಕಳುಹಿಸಿಕೊಟ್ಟಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

83. ದಿಃ 26.10.2013 ರಂದು ಶವ ಪರೀಕ್ಷೆಯಾಗಿದ್ದು ದಿಃ 22.01.2014 ರಂದು ಎಫ್. ಎಸ್. ಎಲ್. ವರದಿಯನ್ನು ಪಡೆದಿದ್ದು ದಿಃ 06.03.2014 ರಂದು ಸಿಮ್ಸ್ ಆಸ್ಪತ್ರೆಯಿಂದ ವರದಿಯನ್ನು ಪಡೆದಿದ್ದು ಮತ್ತು ದಿಃ 22.03.2014 ರಂದು ಬಾಣೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ನೀಡಿದ ಸಾವಿನ ಕುರಿತು ಅಂತಿಮ ವರದಿಯನ್ನು ಇವುಗಳನ್ನು ದಿಃ 21.01.2015 ರಂದು ನ್ಯಾಯಾಲಯಕ್ಕೆ ಮನವಿ ಪತ್ರದೊಂದಿಗೆ ನಿವೇದಿಸಿಕೊಳ್ಳಲಾಯಿತು. ಈ ಮಧ್ಯೆದಲ್ಲಿ ಯಾವ ಕಾರಣಕ್ಕೆ ವಿಳಂಬವಾಗಿದೆ ಎಂಬುದರ ಬಗ್ಗೆ ನಾನು ಕಾರಣವನ್ನು ಹೇಳಿಲ್ಲ ಎಂದರೆ ಸರಿ. ನಾನು ದಿಃ 30.12.2013 ರಂದು ಡಿ.ಎನ್.ಎ ಪರೀಕ್ಷೆಗಾಗಿ ಸಂಗ್ರಹಿಸಿದ ವಸ್ತುಗಳನ್ನು ಕಳುಹಿಸಿದ್ದು ಡಿ.ಎನ್.ಎ ವರದಿಯು ದಿಃ 30.02.2016 ರಂದು ನಾನು ಸ್ವೀಕರಿಸಿದ್ದೇನೆ ಎಂದರೆ ಸರಿ.

84. ನಾನು ಈ ಪ್ರಕರಣದಲ್ಲಿ ಅಸ್ಸಂಬದ್ಧವಾದ ಸಾಕ್ಷಿ ಮತ್ತು ದಾಖಲೆಗಳನ್ನು ಕಲೆ ಹಾಕಿ ಆರೋಪಿಗಳ ವಿರುದ್ಧ ಸುಳ್ಳು

ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಹೆಚ್.ಎಂ.ಎಸ್. ವಕೀಲರಿಂದ – 2 ರಿಂದ 7 ನೇ ಆರೋಪಿತರ ಪರವಾಗಿ

85. 1 ನೇ ಆರೋಪಿತನ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ